# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 16.07.2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ಮುನಿಸ್ವಾಮಿಗೌಡ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ಆನಂದ್. ವಿ – ಸದಸ್ಯರು | ಉಪ ಆಯುಕ್ತರು (ಭೂಸ್ವಾಧೀನ), |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | ವಿಶೇಷ ಭೂಸ್ವಾಧೀನಾಧಿಕಾರಿ, |
| ಕೆ. ಪೂರ್ಣಿಮ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), |
| ಗಂಗಾಂಬಿಕೆ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ, |
| ಕ್ವೀನ್‌ಎಲಿಜ಼ಬೆತ್ – ಸದಸ್ಯರು | ಮುಖ್ಯ ಅಭಿಯಂತರರು (ರ.ಮೂ.ಸೌ), (ದಕ್ಷಿಣ), |
| ನೂರ್ ಜಹಾನ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಪೂರ್ವ, ದಕ್ಷಿಣ), |
| ಟಿ.ಎ. ಗಾಯಿತ್ರಿ – ಸದಸ್ಯರು | (ರ.ಮೂ.ಸೌ–ಪೂರ್ವ), (ಹೆಬ್ಬಾಳ), |
| ಗೈರು ಹಾಜರಿದ್ದ ಸದಸ್ಯರುಗಳು | ಸಹಾಯ ಕಂದಾಯ ಅಧಿಕಾರಿ (ಪೂರ್ವ–ಮಾರುಕಟ್ಟೆ), |
| ತೇಜಸ್ವಿನಿ ಎನ್.ರಾಜು – ಸದಸ್ಯರು | --- |
| ಸುರೇಶ್. ಹೆಚ್ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/52/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(1ಎ)ಪಿಆರ್/39/2008–09, ದಿನಾಂಕ : 11–05–2012 ರಲ್ಲಿ ವಿವರಿಸಿರುವಂತೆ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಹೊರ ಗುತ್ತಿಗೆ ಆಧಾರದ ಮೇಲೆ ಗಣಕ ಯಂತ್ರ ಆಪರೇಟರ್, ಶೀಘ್ರಲಿಪಿಗಾರರು ಮತ್ತು ಇನ್ನಿತರೇ ಸಿಬ್ಬಂದಿಗಳ ಸೇವೆಯನ್ನು 2002ನೇ ಸಾಲಿನಿಂದ ಪಡೆಯಲಾಗಿರುತ್ತದೆ.

ತದನಂತರ, ಹೊರ ಗುತ್ತಿಗೆ ಆಧಾರದ ಮೇಲೆ ಗಣಕ ಯಂತ್ರ ಆಪರೇಟರ್, ಶೀಘ್ರಲಿಪಿಗಾರರು ಮತ್ತು ಇನ್ನಿತರೇ ಸಿಬ್ಬಂದಿಗಳ ಸೇವೆಯನ್ನು ಮೆ॥ ಕಿಯೋನಿಕ್ಸ್ ಸಂಸ್ಥೆ ರವರ ಮುಖಾಂತರ ದಿ:15–01–2009 ರಿಂದ ಪಡೆಯಲಾಗಿರುತ್ತದೆ. ಸದರಿ ಹೊರ ಗುತ್ತಿಗೆ ಸಿಬ್ಬಂದಿಗಳಿಗೆ ಈ ಕೆಳಕಂಡ ಗೌರವಧನವನ್ನು ಪಾವತಿಸಲಾಗುತ್ತಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಸದರಿಯವರುಗಳ ಸೇವೆಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗುತ್ತಿರುತ್ತದೆ.

| Sl. No. | Designation | Total Amount from BBMP | Service charges KEONICS | Gross Amount | Basic | PF | ESI | PT | Total Dedun. | Amount to Employee |
|---|---|---|---|---|---|---|---|---|---|---|
| 1. | Data Entry Operator | 6,476 | 971 | 5,505 | 2,200 | 563 | 358 | | 921 | 4,584 |
| 2. | Stenographer | 7,557 | 1,134 | 6,423 | 3,000 | 468 | 418 | | 1,186 | 5,238 |

ಮೆ॥ ಕಿಯೋನಿಕ್ಸ್ ಸಂಸ್ಥೆಯವರ ಪತ್ರ ದಿನಾಂಕ: 14–12–2011.ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ಆಪರೇಟರ್ ಮತ್ತು ಶೀಘ್ರಲಿಪಿಗಾರರಿಗೆ ಸರ್ಕಾರದ ಕಾರ್ಮಿಕ ಇಲಾಖೆಯ ದಿನಾಂಕ: 21–02–2011ರ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನವನ್ನು ಪಾವತಿಸುವ ಸಂಬಂಧ ನೂತನ ವೇತನ ದರ ಪಟ್ಟಿಯನ್ನು ಸಲ್ಲಿಸಿ, ವೇತನ ಪಾವತಿಸಲು ಕೋರಿರುತ್ತಾರೆ.

ಸದರಿ ನೂತನ ವೇತನ ದರ ಪಟ್ಟಿಯಂತೆ ವೇತನ ಪಾವತಿಸಲು ಬರುವುದಿಲ್ಲವೆಂದು ಈ ಕಛೇರಿ ಸಮಸಂಖ್ಯೆಯ ಪತ್ರ ದಿನಾಂಕ: 05–03–2012ರ ಪತ್ರದಲ್ಲಿ ಮೆ॥ ಕಿಯೋನಿಕ್ಸ್ ಸಂಸ್ಥೆಯವರಿಗೆ ತಿಳಿಸಲಾಗಿರುತ್ತದೆ.

ನಂತರದಲ್ಲಿ, ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಮೆ॥ ಕಿಯೋನಿಕ್ಸ್ ಸಂಸ್ಥೆ ರವರ ಪತ್ರ ದಿನಾಂಕ: 07–03–2012ರ ಪತ್ರದಲ್ಲಿ ಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೂತನವಾಗಿ ಸಲ್ಲಿಸಿರುವ ದರಪಟ್ಟಿಯಂತೆ ವೇತನ ಪಾವತಿಸಲು ಬರುವುದಿಲ್ಲವೆಂದು ತಿಳಿಸಿರುತ್ತೀರಿ. ನಮ್ಮ ಸಂಸ್ಥೆಯ ವತಿಯಿಂದ ಕಾರ್ಮಿಕ ಇಲಾಖೆಯ ಅಧಿಸೂಚನೆಯ ದಿನಾಂಕ: 21–02–2011ರ ಆದೇಶದಂತೆ ಪರಿಷ್ಕೃತ ಕನಿಷ್ಟ ವೇತನವನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ನೂತನ ವೇತನ ದರ ಪಟ್ಟಿಯನ್ನು ತಾವು ಒಪ್ಪಿ ಅನುಮೋದನೆ ನೀಡಿದ್ದಲ್ಲಿ ವಿಸ್ತರಣೆಯ ಕಾರ್ಯಾದೇಶದ ದಿನಾಂಕ: 03–03–2012ರ ಅನುಸಾರ ನಮ್ಮ ಸಂಸ್ಥೆಯಿಂದ ಸಿಬ್ಬಂದಿಗಳನ್ನು ಮುಂದುವರೆಸಲು ಇಚ್ಛಿಸುತ್ತೇವೆ. ನೂತನ ವೇತನ ದರ ಪಟ್ಟಿಯನ್ನು ನೀಡಲು ಇಚ್ಛಿಸದಿದ್ದಲ್ಲಿ ಸಿಬ್ಬಂದಿಗಳನ್ನು
ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಸಂಸ್ಥೆಯ ಸೇವಾವಧಿ ದಿನಾಂಕ: 29–02–2011 ರಂದು ಮುಕ್ತಾಯಗೊಂಡಿರುವುದರಿಂದ ಸಿಬ್ಬಂದಿಗಳ ಸೇವೆಯು ಸಹ ಕೊನೆಗೊಂಡಿರುತ್ತದೆ. ನಿಯೋಜಿತ ಸಿಬ್ಬಂದಿಗಳ ಸೇವೆಯನ್ನು ಪಾಲಿಕೆಯು ಮುಂದುವರೆಸಿದ್ದಲ್ಲಿ ಅವರ ವೇತನ ಮತ್ತು ಕಾನೂನು ಬದ್ಧ ಕಡಿತಗಳ ಜವಾಬ್ದಾರಿಯು ಪಾಲಿಕೆದಾಗಿರುತ್ತದೆಯೆಂದು ತಿಳಿಸಿರುತ್ತಾರೆ.

ಈ ಸಂಬಂಧವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರು ಮೆ॥ ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಚರ್ಚಿಸಿದ್ದ ಸಂದರ್ಭದಲ್ಲಿ ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಸರ್ವೀಸ್ ಚಾರ್ಜ್‌ನ್ನು ಕಡಿಮೆ ಮಾಡಲು ಒಪ್ಪಿದ್ದು, ಇದರಂತೆ ನೂತನ ದರ ಪಟ್ಟಿಯನ್ನು ಕಳುಹಿಸಿಕೊಡಲು ಮೆ॥ ಕಿಯೋನಿಕ್ಸ್ ಸಂಸ್ಥೆಯನ್ನು ಈ ಕಛೇರಿ ಸಮಸಂಖ್ಯೆಯ ಪತ್ರ ದಿನಾಂಕ: 17–03–2012ರ ಪತ್ರದಲ್ಲಿ ಕೋರಲಾಗಿರುತ್ತದೆ.

ಇದರಂತೆ, ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಮೆ॥ ಕಿಯೋನಿಕ್ಸ್ ಸಂಸ್ಥೆ ರವರ ಪತ್ರ ದಿನಾಂಕ: 26–03–2012ರಲ್ಲಿ ನೂತನ ದರ ಪಟ್ಟಿಯನ್ನು ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Quotation & Remuneration Details for providing Stenographer & DEO | | |
|---|---|---|
| Particulars | Stenographer | DEO |
| Billing Amount | 13,800-00 | 10,700-00 |
| Service tax | 1,289-00 | 999-00 |
| | 12,511-00 | 9,701-00 |
| Service Charges | 1,380-00 | 1,070-00 |
| | 11,131-00 | 8,631-00 |
| PF Employer Contribution | 817-00 | 817-00 |
| ESI Employer Contribution | 529-00 | 410-00 |
| Gross to the Candidate | 9,785-00 | 7,404-00 |
| PF Employee Contribution | 720-00 | 720-00 |
| ESI Employee Contribution | 195-00 | 152-00 |
| Professional Tax | | |
| Net payable to Candidate | 8,870-00 | 6,532-00 |

ಮೆ॥ ಕಿಯೋನಿಕ್ಸ್ ಸಂಸ್ಥೆ ರವರು ಸಲ್ಲಿಸಿರುವ ವೇತನ ದರ ಪಟ್ಟಿಯ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರನ್ನು ಅಭಿಪ್ರಾಯ ಕೋರಲಾಗಿ, ಮೆ॥ ಕಿಯೋನಿಕ್ಸ್ ಸಂಸ್ಥೆಯವರ ದಿನಾಂಕ: 26–03–2012ರಲ್ಲಿನ ಪತ್ರದಲ್ಲಿ ನಿಗಧಿಪಡಿಸಿರುವ ವೇತನದ ವಿವರಗಳು ಕಾರ್ಮಿಕ ಇಲಾಖಾ ವತಿಯಿಂದ ನೀಡಲಾಗಿರುವ ಅಧಿಸೂಚನೆ ಪ್ರಕಾರ ಸಮಂಜಸವಾಗಿರುವುದು ಕಂಡುಬಂದಿದ್ದು, ಒಟ್ಟಾರೆ ಅಪರೇಟರ್‌ಗಳ ಸಂಖ್ಯೆ ಅವಕಶ್ಯಕತೆಗಳಿಗೆ ಅನುಗುಣವಾಗಿ ಕಡಿಮೆಗೊಳಿಸುವ ಬಗ್ಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ವರದಿ ಪಡೆದು ಕಡಿಮೆಗೊಳಿಸಿ ಒಟ್ಟಾರೆ ಮೊತ್ತವನ್ನು ಸರಿದೂಗಿಸಲು ಕ್ರಮವಹಿಸಬಹುದಾಗಿದ್ದು ಹಾಲಿ ವಿಷಯದಲ್ಲಿ ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ಆಪರೇಟರ್ ಮತ್ತು ಶೀಘ್ರಲಿಪಿಗಾರರುಗಳ ಸೇವೆಯು ನಗರ ಪಾಲಿಕೆಯ

ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿರುವುದರಿಂದ ಮೆ॥ ಕಿಯೋನಿಕ್ಸ್ ಸಂಸ್ಥೆಯವರು ಮೇಲ್ಕಂಡಂತೆ ಸಲ್ಲಿಸಿರುವ ನೂತನ ದರಪಟ್ಟಿಯನ್ವಯ ಗೌರವಧನವನ್ನು ಮಾರ್ಚ್ 2012ರ ಮಾಹೆಯಿಂದ ಪಾವತಿಸುವ ಸಂಬಂಧ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :-*** ದಿನಾಂಕ: 11-05-2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಸರ್ಕಾರವು ಈಗಾಗಲೇ ಸಂಖ್ಯೆ ಸಿಆಸುಇ 43 ಸೇವನೇ 2008 ದಿನಾಂಕ 07-03-2012ರಂತೆ (ಕರ್ನಾಟಕ ಸಿವಿಲ್ ಸೇವಾ ಕಂಪ್ಯೂಟರ್ ಸಾಕ್ಷಾರತ ಪರೀಕ್ಷೆ) ನಿಯಮಗಳು 2009ರಂತೆ ನಿಯಮವನ್ನು ಜಾರಿಗೆ ತಂದಿದ್ದು, ಅದರಂತೆ ಪ್ರತಿ ಸರ್ಕಾರಿ ನೌಕರನಿಗೂ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ (ನಿಯಮ 1ರ ಉಪನಿಯಮ (3) ರಲ್ಲಿ ನಿರ್ಧಿಷ್ಟ ಪಡಿಸಿರುವ ಹುದ್ದೆಗಳಲ್ಲಿರುವವರನ್ನು ಹೊರತುಪಡಿಸಿ) ಸದರಿ ನಿಯಮವನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪ್ರಸ್ತುತ ಪಾಲಿಕೆಯಲ್ಲಿರುವ ಅಧಿಕಾರಿ/ನೌಕರರುಗಳಿಗೆ 6 (ಆರು) ತಿಂಗಳ ಕಾಲಮಿತಿಯಲ್ಲಿ ಕಂಪ್ಯೂಟರ್ ಕಲಿಕೆಯನ್ನು ಕಡ್ಡಾಯಗೊಳಿಸುವುದು. ಈ ನಿಗದಿತ ಅವಧಿಯೊಳಗೆ ಕಂಪ್ಯೂಟರ್ ಕಲಿಯದಿದ್ದಲ್ಲಿ ಅಂತಹವರ ವಾರ್ಷಿಕ ವೇತನ ಬಡ್ತಿಗಳನ್ನು ಹಾಗೂ ಮುಂಬಡ್ತಿಗಳನ್ನು ತಡೆ ಹಿಡಿಯುವುದು. ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಾಲಿಕೆಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ಕೆಲಸ ಕಾರ್ಯಗಳನ್ನು ಪಾಲಿಕೆಯ ಖಾಯಂ ಸಿಬ್ಬಂದಿಗಳೇ ನಿರ್ವಹಿಸುವಂತೆ ಹಾಗೂ ಶೀಘ್ರಲಿಪಿಗಾರರ ಹುದ್ದೆಯು ಪಾಲಿಕೆಯಲ್ಲಿ ಖಾಲಿಯಿದ್ದಲ್ಲಿ ಅದನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸುವುದೆಂದು ಸೂಚಿಸುತ್ತಾ, ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ದಿನಾಂಕ : 11.05.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

## ***02]. ವಿಷಯದ ಸಂಖ್ಯೆ :-ತೆಆಸ್ಥಾಸ/53/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/527/11-12, ದಿನಾಂಕ : 28-02-2012 ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ : 92, ಶಿವಾಜಿರಸ್ತೆ, ಬಿ ನಂಬರ್ 12ನೇ ಅಡ್ಡರಸ್ತೆ, ಕೂಡುವ ಸ್ಥಳದಲ್ಲಿ ಶ್ರೀ.ವಿನಾರಾಯಣ್ ರವರಿಗೆ ಪೆಟ್ಟಿಗೆ ಅಂಗಡಿ ನಡೆಸಲು 15-12-2008 ರಿಂದ 14-12-2011ರ ವರೆಗೆ ತಿಂಗಳಿಗೆ ರೂ. 583/- ಬಾಡಿಗೆ ನಿಗದಿಪಡಿಸಿ 3 ವರ್ಷಗಳ ಅವಧಿಗೆ ಅನುಮತಿ ನೀಡಲಾಗಿದ್ದು, ದಿನಾಂಕ: 31-12-2011ರ ವರೆಗೆ ಬಾಡಿಗೆ/ಗುತ್ತಿಗೆ ಹಣವನ್ನು ಪೂರ್ಣವಾಗಿ ಪಾವತಿಸಿರುತ್ತಾರೆಂದು ವರದಿ ಮಾಡಿರುತ್ತಾರೆ. ತದನಂತರ ಪುನ: 3 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿದ್ದು, ವಾರ್ಡ್ 63ರ ಪಾಲಿಕೆಯ ಸದಸ್ಯರ ಶಿಫಾರಸ್ಸು ಪತ್ರವನ್ನು ಸಹ ಲಗತ್ತಿಸಿರುತ್ತಾರೆ.

ಸ್ಥಳ ಪರಿಶೀಲನಾ ವರದಿಯಂತೆ ಶ್ರೀ.ವಿ.ನಾರಾಯಣ್ ರವರು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದು, ಮತ್ತೆ 3 ವರ್ಷಗಳ ಕಾಲ ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಹಾಲಿ ತಿಂಗಳ ಬಾಡಿಗೆ ರೂ. 583 ರಿಂದ 750ಕ್ಕೆ ನಿಗದಿಪಡಿಸಬೇಕೆಂದು ಅಭಿಪ್ರಾಯಿಸಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಸ್ವತ್ತಿನ ವಿಸ್ತೀರ್ಣ 5X5=25 ಚದರ ಅಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ 1ಕ್ಕೆ 2500/- ಗಳಾಗಿದ್ದು, ವಾಣಿಜ್ಯ ಶೇ 40% ರಷ್ಟು (1000) ಸೇರಿಸಿದ್ದಲ್ಲಿ ಚದರ ಅಡಿ ಒಂದಕ್ಕೆ ಸ್ವತ್ತಿನ ಮೌಲ್ಯ ರೂ.3500/- ಗಳು 25 ಚದರ ಅಡಿಗಳಿಗೆ ರೂ. 87500/- ಗಳಾಗುತ್ತದೆ. ಮಾರುಕಟ್ಟೆಯ ಬೆಲೆ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ರೂ. 8500/- ಗಳು ಮಾಸಿಕ ರೂ. 729/- ಗಳಾಗುತ್ತದೆ. ದಿನಾಂಕ:01-01-2012 ರಿಂದ 31-12-2014ರ ವರೆಗೆ 3 ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಮೊತ್ತ ರೂ.729/-ಅನ್ನು ನಿಗದಿಪಡಿಸಿ ನವೀಕರಿಸಲು ಮುಂದಿನ ಸೂಕ್ತ ನೀರ್ಣಯಕ್ಕಾಗಿ ಮಂಡಿಸಿರುವ ತಾ॥.28-02-2012ರ ಆಯುಕ್ತರ ಟಿಪ್ಪಣಿ ಒಪ್ಪುತ್ತಾ, ದರ ನಿಗದಿಪಡಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಶಿಫಾರಸ್ಸು ಮಾಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12-04-2012ರ ನಿರ್ಣಯ.

***ನಿರ್ಣಯ :-*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ॥. 12.04.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.729/- ಗುತ್ತಿಗೆ ಮೊತ್ತವನ್ನು ನಿಗದಿಪಡಿಸಲು ಒಪ್ಪಿತು.

## ***03]. ವಿಷಯದ ಸಂಖ್ಯೆ :–ತೆಆಸ್ಥಾಸ/55/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ :ಎ3(1)/ಪಿಆರ್/227/11-12, ದಿನಾಂಕ : 11–04–2012 ರಲ್ಲಿ ವಿವರಿಸಿರುವಂತೆ, ಶ್ರೀ.ಪಿ.ಎಲ್.ವಸುಂಧರ ರವರು ಎ.ಎಂ.ಲೇನ್, 1ನೇ ಕ್ರಾಸ್‌ನಲ್ಲಿರುವ ಎಲ್ ಆಕಾರದಲ್ಲಿರುವ 10X6 ಅಡಿಗಳ ಖಾಲಿ ಜಾಗದಲ್ಲಿ ಒಂದು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡಲು ಗುತ್ತಿಗೆಗೆ ನೀಡಲು ಕೋರಿ ದಿನಾಂಕ:20–05–2011 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕಾಟನ್‌ಪೇಟೆ) ಉಪ ವಿಭಾಗದವರು ಸ್ಥಳ ಪರಿಶೀಲಿಸಿ ಸದರಿ ಜಾಗವು ಮೂಲೆ ನಿವೇಶನವಾಗಿದ್ದು ಹಾಗೂ ಬಿವಿಕೆ ಅಯ್ಯಂಗಾರ್ ರಸ್ತೆಗೆ ಅಭಿಮುಖವಾಗಿರುತ್ತದೆ. ಸದರಿ ಜಾಗದಲ್ಲಿರುವ 10X6 ಅಡಿಗಳ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದಾಗಿ ವಲಯಾಧಿಕಾರಿಗಳು ಸಹಾ ಅನುಮೋದನೆಗಾಗಿ ಕಡತ ಸಲ್ಲಿಸಿರುತ್ತಾರೆ. ವರದಿಯಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 10X6=60 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.7500/– ಗಳಿರುತ್ತದೆ. ಇದಕ್ಕೆ ಶೇ 40% ರಷ್ಟು ಹೆಚ್ಚಿಸಿದಾಗ 10500/– ಇದರಂತೆ ಲೆಕ್ಕಾಚಾರ ಮಾಡಲಾಗಿ, 10500X60=630000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.63000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5250/– ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ಬೆಂಗಳೂರು ದಿನಾಂಕ:02–06–2003ರಲ್ಲಿನ ಕ್ರಮ ಸಂಖ್ಯೆ vi) ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿದೆ.

ಈ ಹಿನ್ನೆಲೆಯಲ್ಲಿ ಮೇಲೆ ನಮೂದಿಸಿರುವ ಸ್ಥಳವನ್ನು ಹರಾಜು ಮೂಲಕ ಗುತ್ತಿಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ದಿನಾಂಕ: 11–04–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಸ್ಥಳವನ್ನು ಹರಾಜು ಮೂಲಕ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯ.

***ನಿರ್ಣಯ :–*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17.04.2012ರ ನಿರ್ಣಯವನ್ನು ಒಪ್ಪಿದೆ.

## ***04]. ವಿಷಯದ ಸಂಖ್ಯೆ :–ತೆಆಸ್ಥಾಸ/56/2012–13***

ಆಯುಕ್ತರ ಟಿಪ್ಪಣಿ ದಿನಾಂಕ : 14–02–2012 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಟ್ಟು 8 ವಲಯಗಳನ್ನಾಗಿ ವಿಂಗಡಿಸಿದ್ದು, ಇದರ ವ್ಯಾಪ್ತಿಯು ಈ ಹಿಂದೆ ಇದ್ದ ಸುಮಾರು 225 ಚ.ಕಿ.ಮೀ ನಿಂದ 800 ಚ.ಕಿ.ಮಿ. ನಷ್ಟು ವ್ಯಾಪ್ತಿಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 2001 ರ ಜನಗಣತಿ ಪ್ರಕಾರ ಸುಮಾರು 60 ಲಕ್ಷದಷ್ಟಿದ್ದು, 2011ರ ಅಂತ್ಯಕ್ಕೆ ಒಂದು ಕೋಟಿ ಮೀರುವ ನಿರೀಕ್ಷೆ ಇದೆ. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ನಗರವು ನಿರಂತರವಾಗಿ ಬೆಳೆಯುತ್ತಿದ್ದು, ನಗರದ ಹೊರವಲಯದಲ್ಲಿ ಅನೇಕ ಕೈಗಾರಿಕೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನದ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಬೆಂಗಳೂರು ನಗರದ ವಾಹನ ಸಂಖ್ಯೆಯು ಕೂಡ ಸತತವಾಗಿ ಹೆಚ್ಚುತ್ತಿದ್ದು, 1980ರಲ್ಲಿ ಸುಮಾರು 17 ಲಕ್ಷದಷ್ಟಿದ್ದ ಸಂಖ್ಯೆಯು, 2011ರಲ್ಲಿ ಸುಮಾರು 40.00 ಲಕ್ಷಕ್ಕೆ ಬೆಳೆದಿರುತ್ತದೆ. ಈ ವಾಹನಗಳ ಪೈಕಿ ಹೆಚ್ಚಾಗಿ ದ್ವಿಚಕ್ರವಾಹನಗಳಾಗಿದ್ದು, ಇತ್ತೀಚೆಗೆ ಕಾರುಗಳ ಹಾಗೂ ಇತರೆ ವಾಹನಗಳ ಸಂಖ್ಯೆಯು ಸಹ ಅತಿ ವೇಗವಾಗಿ ಬೆಳೆಯುತ್ತಿದೆ.

ಬೆಂಗಳೂರು ನಗರದಲ್ಲಿನ ಪ್ರಮುಖ ಕಾರಿಡಾರ್‌ಗಳಲ್ಲಿ ಸುಮಾರು 600ಕ್ಕೂ ಹೆಚ್ಚು ಪ್ರಮುಖ ಜಂಕ್ಷನ್‌ಗಳಿದ್ದು, ಇವುಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಗಳಿದ್ದು, ವಾಹನ ವೇಗದ ಮಿತಿ ಪ್ರತಿ ಗಂಟೆಗೆ ಸರಾಸರಿ 10.00ಕಿ.ಮೀ.ಗಿಂತ ಕಡಿಮೆಯಾಗಿದೆ. ಇಂತಹ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಜಾಮ್ ಆಗುವುದನ್ನು ತಪ್ಪಿಸಲು, ಸಿಗ್ನಲ್ ರಹಿತ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಿದರೆ ವಾಹನ ಸಂಚಾರದ ವೇಗ ಹೆಚ್ಚಿಸಿ ಸುರಕ್ಷಿತ ಸಂಚಾರವನ್ನು ಕಲ್ಪಿಸುವುದಲ್ಲದೇ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿ ಸಾರ್ವಜನಿಕರ ಅಮೂಲ್ಯ ವೇಳೆಯ ಉಳಿತಾಯ ಅಲ್ಲದೆ ಇಂಧನ ಉಳಿಕೆ ಮತ್ತು ವಾಯುಮಾಲಿನ್ಯವನ್ನು ತಕ್ಕ ಮಟ್ಟಿಗೆ ಕಡಿಮೆಗೊಳಿಸಬಹುದಾಗಿದೆ.

2011–12 ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ 7 ಕಾರಿಡಾರ್‌ಗಳನ್ನು ಸಿಗ್ನಲ್ ಮುಕ್ತಗೊಳಿಸಲು ಪ್ರಮುಖ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಪ್ರಸ್ತಾಪಿಸಿದ್ದು, ಅವುಗಳಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ (ಪುಟ ಸಂಖ್ಯೆ 180 ರಿಂದ 182 ರವರೆಗೆ). ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 7 ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಡ್ ಸೆಪರೇಟರ್ (ಮೇಲ್ಸೇತುವೆ ಮತ್ತು ಅಂಡರ್ ಪಾಸ್‌ಗಳನ್ನು) ನಿರ್ಮಾಣ ಮಾಡಿ ಸಿಗ್ನಲ್ ಮುಕ್ತಗೊಳಿಸಲು ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಕಾರಿಡಾರ್‌ನ ಹೆಸರು | ಜಂಕ್ಷನ್‌ಗಳ ಸಂಖ್ಯೆ | ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುವ ಸ್ವತ್ತುಗಳ ಅಂದಾಜು ಒಟ್ಟು ವಿಸ್ತೀರ್ಣ (ಚ.ಮೀ.ಗಳಲ್ಲಿ) |
|---|---|---|---|
| 1 | ಡಾ॥ ರಾಜ್‌ಕುಮಾರ್ ರಸ್ತೆ– ಸರ್ಕಾರಿ ಸೋಪ್ ಕಾರ್ಖಾನೆ ಜಂಕ್ಷನ್ ನಿಂದ ಮಾಗಡಿ ರಸ್ತೆ ಡೀವಿಯೇಶನ್ ಜಂಕ್ಷನ್‌ವರೆಗೆ | | |
| | ವಿವೇಕಾನಂದ ಜಂಕ್ಷನ್ | 1 | 2275.00 |
| | ಓಕಳಿಪುರಂ ಜಂಕ್ಷನ್ | 1 | 1332.00 |
| | ಒಟ್ಟು | 2 | 3607.00 |
| 2 | ಮಾಗಡಿ ರಸ್ತೆ– ಕಾರ್ಡ್ ರಸ್ತೆಯಿಂದ ಹೊರವರ್ತುಲ ರಸ್ತೆ ಜಂಕ್ಷನ್‌ವರೆಗೆ | | |
| | ಜೈಮುನಿರಾವ್ ವೃತ್ತ | 1 | 2723.58 |
| | ಬಸವೇಶ್ವರನಗರ ಜಂಕ್ಷನ್ | 1 | 560.15 |
| | ನಿಗಧಿತ 'ಯು' ತಿರುವು ಪಟ್ಟಾಲಮ್ಮ ದೇವಸ್ಥಾನದ ರಸ್ತೆ | 1 | 1503.49 |
| | ಪಟ್ಟಾಲಮ್ಮ ರಸ್ತೆ ಮತ್ತು ಹೊರವರ್ತುಲ ರಸ್ತೆಯ ಜಂಕ್ಷನ್ ಹತ್ತಿರ 'ಯು' ತಿರುವು. | 1 | 1595.37 |
| | ಒಟ್ಟು | 4 | 6382.59 |
| 3 | ಹೊರವರ್ತುಲ ರಸ್ತೆ– ಮೈಸೂರು ರಸ್ತೆ ಜಂಕ್ಷನ್‌ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ | | |
| | ಕೆ.ಇ.ಬಿ. ಜಂಕ್ಷನ್ ಪಿ.ಇ.ಎಸ್.ಐ.ಟಿ | 1 | 156.22 |
| | ಡಾ॥ ಮುತ್ತುರಾಜ್ ಜಂಕ್ಷನ್ | 1 | 2464.41 |
| | ಫುಡ್‌ವಲ್ಡ್ ಜಂಕ್ಷನ್ | 1 | 1794.04 |
| | ಡಾಲರ್ಸ್ ಕಾಲೋನಿ ಜಂಕ್ಷನ್ | 1 | 1675.01 |
| | ಒಟ್ಟು | 4 | 6089.68 |
| 4 | ಹೊಸೂರು ಲಷ್ಕರ್ ರಸ್ತೆ – ವೆಲ್ಲಾರ ಜಂಕ್ಷನ್ ನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ | | |
| | (ಸಿಮೆಂಟ್ರಿ ರೋಡ್ ಜಂಕ್ಷನ್) ಬನ್ನೇರುಘಟ್ಟ ರಸ್ತೆ | 1 | 1945.88 |
| | ಆಡುಗೋಡಿ ಜಂಕ್ಷನ್ | 1 | 3043.94 |
| | ಲಾಂಗ್‌ಫೋರ್ಡ್ ಜಂಕ್ಷನ್ | 1 | 5937.19 |
| | ವೆಲ್ಲಾರ ಜಂಕ್ಷನ್ | 1 | 1102.64 |
| | ಒಟ್ಟು | 4 | 12029.65 |
| 5 | ಬನ್ನೇರುಘಟ್ಟ ರಸ್ತೆ – ಜೇಡಿಮರ ಜಂಕ್ಷನ್‌ನಿಂದ ಕೋಳಿಫಾರಂ ವರೆಗೆ | | |
| | ಜೇಡಿಮರ ಜಂಕ್ಷನ್ | 1 | 12639.43 |
| | ಬಿಳೇಕಹಳ್ಳಿ ಜಂಕ್ಷನ್ | 1 | 7723.53 |
| | ಅರೆಕೆರೆ ರೋಡ್ ಜಂಕ್ಷನ್ | 1 | 9571.87 |
| | ಹುಳಿಮಾವು ಗೇಟ್ ಜಂಕ್ಷನ್ | 1 | 14459.63 |
| | ಒಟ್ಟು | 4 | 44394.46 |

| | | | |
|---|---|---|---|
| 6 | ಹಳೆ ವಿಮಾನ ನಿಲ್ದಾಣ ರಸ್ತೆ– ವೆಲ್ಲಾರ ಜಂಕ್ಷನ್ ನಿಂದ ರಾಜ್ಯ ಹೆದ್ದಾರಿ–35 ರವರೆಗೆ | | |
| | ಹೋಸ್ ಮ್ಯಾಟ್ ಜಂಕ್ಷನ್ | 1 | 4050.00 |
| | ಲೋಯರ್ ಅಗರಂ ಜಂಕ್ಷನ್ | 1 | 11169.00 |
| | ಎ.ಎಸ್.ಸಿ. ಜಂಕ್ಷನ್ | 1 | 3877.00 |
| | ಕಮಾಂಡೋ ಆಸ್ಪತ್ರೆ ಜಂಕ್ಷನ್ | 1 | 4168.00 |
| | ದೊಮ್ಮಲೂರು ಜಂಕ್ಷನ್ | 1 | 3290.00 |
| | ಮಣಿಪಾಲ್ ಆಸ್ಪತ್ರೆ ಜಂಕ್ಷನ್ | 1 | 2655.00 |
| | ವಿಂಡ್–ಟನಲ್ ಜಂಕ್ಷನ್ | 1 | 4136.00 |
| | ಸುರಂಜನ್‌ದಾಸ್ ಜಂಕ್ಷನ್ | 1 | 1888.00 |
| | ನಾಮ್‌ಜೋಶಿ ಜಂಕ್ಷನ್ | 1 | 7462.00 |
| | ಮಾರತ್‌ಹಳ್ಳಿ ಜಂಕ್ಷನ್ | 1 | 7348.00 |
| | ಕುಂದಲಹಳ್ಳಿ ಜಂಕ್ಷನ್ | 1 | 8599.00 |
| | ಒಟ್ಟು | 11 | 58642.00 |
| 7 | ಮೇಖ್ರಿ ಸರ್ಕಲ್‌ನಿಂದ ಹಳೆ ಮದ್ರಾಸ್ ರಸ್ತೆ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ–207 ವರೆಗೆ | | |
| | ಸಿ.ಐ.ಎಲ್. ಜಂಕ್ಷನ್ | 1 | 8043.00 |
| | ಮುನಿರೆಡ್ಡಿಪಾಳ್ಯ ಜಂಕ್ಷನ್ | 1 | 5126.00 |
| | ಜಯಮಹಲ್ 5ನೇ ಮುಖ್ಯರಸ್ತೆ ಜಂಕ್ಷನ್ | 1 | 4422.00 |
| | ನಂದಿದುರ್ಗ ರಸ್ತೆ ಜಂಕ್ಷನ್ | 1 | 4862.00 |
| | ಹೇನ್ಸ್ ಮತ್ತು ಸೆಪ್ಪಿಂಗ್ಸ್ ರಸ್ತೆ ಜಂಕ್ಷನ್ | 1 | 8694.00 |
| | ಧೋಭಿಘಾಟ್ ರಸ್ತೆ ಜಂಕ್ಷನ್ | 1 | 439.00 |
| | ಥಾಮರಾಯ್ ಕನ್ನನ್ ಮತ್ತು ಹಳೆ ಮದ್ರಾಸ್ ರಸ್ತೆ ಜಂಕ್ಷನ್ | 1 | 10890.00 |
| | ಇಂದಿರಾನಗರ ಡಬಲ್ ರೋಡ್ ಜಂಕ್ಷನ್ | 1 | 8641.00 |
| | ಇಂದಿರಾನಗರ 80 ಅಡಿ ರಸ್ತೆ ರೋಡ್ ಜಂಕ್ಷನ್ | 1 | 4462.00 |
| | ಸುರಂಜನ್ ದಾಸ್ ಜಂಕ್ಷನ್ | 1 | 13194.00 |
| | ವರ್ತೂರು (ಕಗ್ಗದಾಸ ಪುರ) ರಸ್ತೆ ಜಂಕ್ಷನ್ | 1 | 15049.00 |
| | ಹೆಚ್.ಪಿ.ರಸ್ತೆ ಜಂಕ್ಷನ್ | 1 | 2368.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಮೇಲು ಸೇತುವೆ) | 1 | 12089.00 |
| | ಹೂಡಿ ಮುಖ್ಯರಸ್ತೆ ಜಂಕ್ಷನ್ ( ಅಂಡರ್ ಪಾಸ್) | 1 | 878.00 |
| | ಇ.ಪಿ.ಐ.ಪಿ ಮತ್ತು ಅಗ್ರಹಾರ ರಸ್ತೆ ಜಂಕ್ಷನ್ | 1 | 13168.00 |
| | ಹೋಪ್ ಫಾರಂ ರಸ್ತೆ ಜಂಕ್ಷನ್ | 1 | 2700.00 |
| | ಒಟ್ಟು | 16 | 115475.00 |
| | **ಏಳು ಕಾರಿಡಾರ್‌ಗಳಿಂದ ಒಟ್ಟು** | **45** | **246170.38 ಚ.ಮೀ.** |

ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಹಿಂದೆ ಟಿ.ಡಿ.ಆರ್. ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು. ಆದರೆ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅನೇಕ ಸ್ವತ್ತಿನ ಮಾಲೀಕರು ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೆ ಟಿ.ಡಿ.ಆರ್. ನಿಯಮಾವಳಿಯ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಕಾನೂನಿನ ಅಡಿಯಲ್ಲಿ ಯಾವುದೇ ವ್ಯಕ್ತಿಯನ್ನು ಒತ್ತಾಯಿಸುವಂತಿಲ್ಲ. ಈಗಾಗಲೇ ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಿರುವುದರಿಂದ ಸಾರ್ವಜನಿಕರು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪ್ರಕ್ರಿಯೆಗೆ ಮುಂದೆ ಬರಲು ನಿಗಧಿತ 15 ದಿನಗಳ ಕಾಲಾವಕಾಶವನ್ನು ನೀಡಿ ತದನಂತರ ಸಾರ್ವಜನಿಕರಿಂದ ಸಾಕಷ್ಟು ಉತ್ತೇಜನ ದೊರಕದಿದ್ದಲ್ಲಿ ಭೂಸ್ವಾಧೀನ ಕಾಯ್ದೆ

1894ರ ಸೆಕ್ಷನ್ 23ರಲ್ಲಿ ನಿಗಧಿಪಡಿಸಲಾದ ದರಗಳ ಅನ್ವಯ ಪರಿಹಾರ ನೀಡಿ ಖಾಸಗಿ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕೆಂಬ ಅಂಶವನ್ನು ಗಮನಿಸಬೇಕಾಗಿರುತ್ತದೆ.

ಮೇಲ್ಕಂಡ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕಾಗಿದ್ದಲ್ಲಿ ಕಾಮಗಾರಿ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮುನ್ನ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ Encumbrance ಮತ್ತು ಮೊಕದ್ದಮೆ ಮುಕ್ತ ಸ್ವತ್ತಾಗಿ ಗುತ್ತಿಗೆದಾರರಿಗೆ ಯೋಜನಾ ಪ್ರದೇಶವನ್ನು ಹಸ್ತಾಂತರ ಮಾಡಿದಲ್ಲಿ ನಿಗಧಿತ ವೇಳೆಯೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು. ಇಲ್ಲದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬದಿಂದ ಗುತ್ತಿಗೆದಾರರು ಕಾಮಗಾರಿಗಳ ಅನುಷ್ಠಾನಕ್ಕೆ ಆಗಿರುವ ಅಡಚಣೆ, ಕಾಲವಿಳಂಬದ ಬಗ್ಗೆ ಹೆಚ್ಚಿನ ಮೊತ್ತವನ್ನು ಕೋರಿರುವ ಉದಾಹರಣೆಗಳು ಈಗಾಗಲೇ ನಮ್ಮ ಮುಂದೆ ಇದ್ದು, ಇದರಿಂದ ಯೋಜನೆಯು ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳದೆ ಸಾರ್ವಜನಿಕರಿಂದ ಸಾಕಷ್ಟು ದೂಷಣೆಗಳು ಬಂದಿರುತ್ತವೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2011–12ನೇ ಸಾಲಿನ ಅಯವ್ಯಯ ಅಂದಾಜಿನಲ್ಲಿ ಪ್ರಸ್ತಾಪಿಸಿರುವ 7 ಪ್ರಮುಖ ಸಿಗ್ನಲ್ ಮುಕ್ತ ಕಾರಿಡಾರ್‌ಗಳಲ್ಲಿ ಗ್ರೇಟ್ ಸೆಪರೇಟರ್‌ಗಳನ್ನು ನಿರ್ಮಿಸಲು ಬೇಕಾಗಿರುವ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಸದರಿ ಕಾರಿಡಾರ್‌ಗಳನ್ನು ಟಿ.ಡಿ.ಆರ್. ಮುಖೇನ ಭೂಸ್ವಾಧೀನ ಪಡಿಸಿಕೊಳ್ಳಲು ಕಾಲಾವಕಾಶಗಳನ್ನು ನೀಡಿ ಟಿ.ಡಿ.ಆರ್. ಮುಖೇನವೇ ಭೂಸ್ವಾಧೀನ ಪ್ರಕ್ರಿಯೆಗೆ ಒತ್ತುಕೊಟ್ಟು ಬೇಕಾಗಿರುವ ಸ್ವತ್ತುಗಳನ್ನು ಪಡೆದುಕೊಳ್ಳಲು ಕ್ರಮವಹಿಸಲಾಗುವುದು. ಈ ಅವಧಿಯಲ್ಲಿಯೂ ಸಹ ಟಿ.ಡಿ.ಆರ್.ಗೆ ಸಾರ್ವಜನಿಕರಿಂದ ಯಾವುದೇ ಸ್ಪಂದನ/ಒಪ್ಪಿಗೆ ಸಿಗದೇ ಇದ್ದ ಪಕ್ಷದಲ್ಲಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಹಾಗೂ ಸಾರ್ವಜನಿಕರ ಅನಗತ್ಯ ತೊಂದರೆಗಳನ್ನು ನಿವಾರಿಸಲು ಮೇಲ್ಕಂಡ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆ ಸೆಕ್ಷನ್ 23ರ ಅನ್ವಯ ಭೂಸ್ವಾಧೀನವನ್ನು ಪ್ರತಿ ಜಂಕ್ಷನ್‌ವರೆಗೆ ಪ್ರಾಮುಖ್ಯತೆ ಮೇರೆಗೆ ಹಂತ ಹಂತವಾಗಿ ಸ್ವತ್ತುಗಳನ್ನು ವಶಪಡಿಸಿಕೊಂಡು ಹಾಗೂ ಅದಕ್ಕೆ ತಗಲುವ ಭೂಪರಿಹಾರ ಹಾಗೂ ಇತರೆ ವೆಚ್ಚಗಳಿಗೆ ಪಾಲಿಕೆಯ ಆಯವ್ಯಯದಲ್ಲಿ ಮೀಸಲಿಡುವ ಅನುದಾನದಿಂದ ಭರಿಸುವ ಬಗ್ಗೆ ಆಯುಕ್ತರಿಗೆ ಅಧಿಕಾರ ನೀಡಲು ಅನುಮೋದನೆಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ನಗರ ಯೋಜನಾ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಅನುಮೋದನೆಗೆ ಮಂಡಿಸಿರುವ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 08–03–2012ರ ನಿರ್ಣಯ ಹಾಗೂ ತಾ||.14.02.2012ರ ಆಯುಕ್ತರ ಟಿಪ್ಪಣಿ ಒಪ್ಪಲಾಗಿರುವ ನಗರ ಯೋಜನಾ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

***<u>ನಿರ್ಣಯ :–</u>*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ||. 12.04.2012ರ ನಿರ್ಣಯವನ್ನು ಒಪ್ಪಿದೆ

## ***<u>05]. ವಿಷಯದ ಸಂಖ್ಯೆ :–ತೆಲೆಸ್ಥಾಸ/57/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್‌ಎಕ್ಯೂ/ಸಿಆರ್/20/2011–12, ದಿನಾಂಕ : 30–03–2012 ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ. 129, ಜ್ಞಾನಭಾರತಿ ವ್ಯಾಪ್ತಿಯಲ್ಲಿ ಬರುವ ಗೋವಿಂದರಾಜ ವೃತ್ತದಿಂದ ಮಲ್ಲತ್ತಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ಹಾಲಿ 20 ಅಡಿ ಅಗಲದ ಕಚ್ಚಾ ರಸ್ತೆಯಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಮಲ್ಲತ್ತಹಳ್ಳಿ ಕೆರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡುವುದರಿಂದ ಸದರಿ ರಸ್ತೆಯನ್ನು 60 ಅಡಿ ಅಗಲಕ್ಕೆ ವಿಸ್ತರಿಸಿ ರಸ್ತೆ ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದೆ ಎಂದು ಹಾಗೂ ಈ ಸಂಬಂಧ ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ ನಂ. 5 ರಲ್ಲಿನ ಸುಮಾರು 45,540 ಚ.ಅಡಿ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಳ್ಳಲು (1) ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಲಯ, (2) ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿನಗರ ವಲಯ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು, ರಾಜರಾಜೇಶ್ವರಿ ನಗರ ವಲಯ ಮತ್ತು ಅಪರ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ ರವರು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನ ಪ್ರಸ್ತಾವನೆಯೊಂದಿಗೆ ಸಲ್ಲಿಸಲಾಗಿರುವ ಭೂಸ್ವಾಧೀನ ಪ್ರಸ್ತಾಪಿತ ಆಸ್ತಿಗಳ ವಿವರ, ವ್ಯಾಲುಯೇಷನ್ ತಃಖ್ತೆ, ನಮೂನೆ ಎ ಮತ್ತು ಡಿ, ಮತ್ತು ಭೂಮಾಪಕರು ಸದರಿ ಪ್ರದೇಶದ ಅಳತೆ ಮಾಡಿ ತಯಾರಿಸಿರುವ ನಕ್ಷೆಯನ್ನು ಪರಿಶೀಲಿಸಲಾಗಿದೆ. ಅದರಂತೆ, ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ಜಮೀನು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತರಪುರ ಹೋಬಳಿ, ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ 5 ರ ಪೈಕಿ ಜಮೀನಾಗಿದ್ದು, ಇದರಲ್ಲಿನ ಒಟ್ಟು 6 ಎಕರೆ–7 ಗುಂಟೆ ವಿಸ್ತೀರ್ಣದಲ್ಲಿ (759 x 60)= 45,540 ಚದರ ಅಡಿ ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ. 2010–2011ನೇ ಸಾಲಿನ ಪಹಣಿ ಪತ್ರಿಕೆ (RTC) ಯನ್ನು ಪರಿಶೀಲಿಸಲಾಗಿ, ಸದರಿ ಜಮೀನುಗಳ/ಆಸ್ತಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಸರ್ವೆ ನಂ. | ಒಟ್ಟು ವಿಸ್ತೀರ್ಣ ಎ–ಗುಂ | ಆರ್.ಟಿ.ಸಿ.ಯಂತೆ ಖಾತೆದಾರರ / ಅನುಭವದಾರರ ಹೆಸರು | ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ ವಿಸ್ತೀರ್ಣ (ಚ.ಅ.ಗಳಲ್ಲಿ) | ಚಕ್ಕುಬಂದಿ | | | |
|---|---|---|---|---|---|---|---|
| | | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| 5 | 6–07 | ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ, ರಾಜಣ್ಣ ಬಿನ್ ಲೇಟ್ ಮಾರಪ್ಪ, ಚಂದ್ರಮತಿ ಕೋಂ ಚಂದ್ರೇಗೌಡ, ಮಧುಸೂಧನ್, ಗಂಗಮ್ಮ, ರಮೇಶ್ ರೇಖಾ ಬಿನ್ ನಾಗರಾಜ್, ಟಿ.ಜಿ.ರಂಗಶಾಮಯ್ಯ, ಟಿ.ಆರ್.ಚಂದ್ರಶೇಖರಯ್ಯ, ಎಸ್ ಮಂಜುಳ ಬಿನ್ ಸಿದ್ದಪ್ಪ, | 45,540 (759 x 60) | ಸ.ನಂ.5 ರ ಉಳಿಕೆ | ಡಿ–ಗ್ರೂಪ್ ನೌಕರರ ಬಡಾವಣೆ | ರಸ್ತೆ | ಮಲ್ಲತ್ತಹಳ್ಳಿ ಕೆರೆ ಜಾಗ |

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುವ ಜಾಗವು ಕೃಷಿ ಜಮೀನಾಗಿದ್ದು, ಸದರಿ ಜಾಗದಲ್ಲಿ 3 ತಾತ್ಕಾಲಿಕ ಷೆಡ್‌ಗಳು ಇರುವುದಾಗಿ ಕಾಮಗಾರಿ ಇಲಾಖೆಯಿಂದ ವರದಿ ನೀಡಲಾಗಿದೆ. ಈ ಜಮೀನಿಗೆ ಭೂಪರಿವರ್ತನೆ ಆದೇಶವಾಗಿರುವ ಬಗ್ಗೆಯಾಗಲೀ, ಹಿಂದಿನ ನಗರಸಭೆಯಲ್ಲಾಗಲೀ ಅಥವಾ ಹಾಲಿ ಪಾಲಿಕೆಯಲ್ಲಾಗಲೀ ಖಾತೆ ನೋಂದಾವಣೆಯಾಗಿರುವ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಲಭ್ಯ ಆರ್.ಟಿ.ಸಿ.ದಾಖಲೆ ಮತ್ತು ಮ್ಯುಟೇಶನ್ ಪ್ರತಿಗಳಲ್ಲಿ ಕಂಡುಬಂದಂತೆ ಗಿಡ್ಡದಕೊನೇನಹಳ್ಳಿ ಗ್ರಾಮದ ಸರ್ವೆ 5 ರಲ್ಲಿ ಒಟ್ಟು 6 ಎಕರೆ–7 ಗುಂಟೆ ವಿಸ್ತೀರ್ಣದಲ್ಲಿ 7 ಗುಂಟೆ ಖರಾಬು ಕಳೆದು ಜಾತಾ 6 ಎಕರೆ ಜಮೀನಿನಲ್ಲಿ ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ ಮತ್ತು ರಾಜಣ್ಣ ಬಿನ್ ಲೇಟ್ ಮಾರಪ್ಪ ನವರಿಗೆ ಜಂಟಿಯಾಗಿ 2 ಎಕರೆ 33 ಗುಂಟೆ, ಎಂ.ಸಿದ್ದಪ್ಪ ಬಿನ್ ಲೇಟ್ ಮಾರಪ್ಪ ರವರಿಗೆ 14 ಗುಂಟೆ ಮತ್ತು 37 1/2 ಗುಂಟೆ, ರಾಜಣ್ಣ ಬಿನ್ ಲೇಟ್ ಮಾರಪ್ಪ ನವರಿಗೆ 25 1/2 ಗುಂಟೆ, ಟಿ. ಜಿ. ರಂಗಶಾಮಯ್ಯ ಮತ್ತು ಟಿ.ಆರ್.ಚಂದ್ರಶೇಖರಯ್ಯ ರವರಿಗೆ 1 ಎಕರೆ, ಎಸ್ ಮಂಜುಳ ಬಿನ್ ಸಿದ್ದಪ್ಪ ರವರಿಗೆ 10 ಗುಂಟೆ ಜಮೀನಿಗೆ ಕಂದಾಯ
ಖಾತೆ ದಾಖಲಾಗಿರುತ್ತದೆ. ಭೂಸ್ವಾಧೀನ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿರುವ ಆಸ್ತಿಗಳ ಖಾತೆದಾರರ/ಅನುಭವದಾರರ ಪಟ್ಟಿಯಲ್ಲಿಮೇಲ್ಕಂಡ ಖಾತೆದಾರರ ಜೊತೆ ಚಂದ್ರಮತಿ ಕೋಂ ಚಂದ್ರೇಗೌಡ, ಮಧುಸೂಧನ್, ಗಂಗಮ್ಮ, ರಮೇಶ್, ರೇಖಾ ಬಿನ್ ನಾಗರಾಜ್ ರವರ ಹೆಸರುಗಳನ್ನು ಸಹ ಉಲ್ಲೇಖಿಸಲಾಗಿದೆ. ಆದರೆ ಈ ಜಮೀನಿನಲ್ಲಿ ಅವರಿಗಿರುವ ಹಕ್ಕಿನ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಗಿಡದಕೊನೇನಹಳ್ಳಿ ಸರ್ವೆ ನಂ.5 ರಲ್ಲಿರುವ ಒಟ್ಟು 6 ಎಕರೆ 7 ಗುಂಟೆ ಭೂಸ್ವಾಧೀನಕ್ಕೆ ಪ್ರಸ್ತಾಪಿಸಿರುವ 45,540 ಚ.ಅ. ಜಾಗದ ಹಕ್ಕು ಯಾರ ಯಾರ ಹಕ್ಕುದಾಖಲೆಯಲ್ಲಿರುತ್ತದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಹಾಗೂ ಈ ಜಮೀನಿನಲ್ಲಿ 7 ಗುಂಟೆ ಖರಾಬು ಇದ್ದು, ಭೂಸ್ವಾಧೀನ ಪ್ರಸ್ತಾಪಿತ ಜಾಗದಲ್ಲಿ ಖರಾಬು ಜಾಗ (ಉದಾ: ಕಾಲುದಾರಿ, ಬಂಡಿದಾರಿ, ಹಳ್ಳ ಇತ್ಯಾದಿ) ಸೇರಿದೆಯೇ/ಇಲ್ಲವೇ ಎಂಬ ಬಗ್ಗೆ ಸಹ ಮಾಹಿತಿ ಇರುವುದಿಲ್ಲ. ಭೂಸ್ವಾಧೀನ ಪ್ರಸ್ತಾಪಿತ ಜಾಗದಲ್ಲಿ ಖರಾಬು ಇದ್ದಲ್ಲಿ ಅದನ್ನು ಕಳೆದು ಉಳಿಕೆ ಜಾಗವನ್ನು ಮಾತ್ರ ಭೂಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಗ್ರಾಮ ನಕಾಶೆ/ ಟಿಪ್ಪಣಿ/ ಖರಾಬು ಉತಾರು ಗಳನ್ನು ಪಡೆದು ಪರಿಶೀಲಿಸಬೇಕಾಗುತ್ತದೆ. ಅಲ್ಲದೆ ಪ್ರಸ್ತಾಪಿತ ಜಾಗದಲ್ಲಿ ಮೂರು ಷೆಡ್‌ಗಳು ಇದ್ದು, ಇವು ಸಿದ್ದಪ್ಪ ಬಿನ್ ಲೇಟ್ ಮಾರಪ್ಪ, ಮಧುಸೂದನ್ ಮತ್ತು ಗಂಗಮ್ಮ ರವರು ನಿರ್ಮಾಣ ಮಾಡಿರುತ್ತಾರೆ ಎಂದು ವರದಿ ಸಲ್ಲಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಪೂರಕ ದಾಖಲೆಗಳು ಕಂಡುಬರುವುದಿಲ್ಲ. ಭೂಸ್ವಾಧೀನ ಕಾಯ್ದೆಯ

ಕಲಂ 5(ಎ) ವಿಚಾರಣೆಯಲ್ಲಿ ಭೂಸ್ವಾಧೀನ ಪ್ರಸ್ತಾಪಿತ ಜಮೀನಿನ ಹಕ್ಕುದಾಖಲೆಗಳನ್ನು ಪರಿಶೀಲಿಸಿ ಅಂತಿಮಗೊಳಿಸುವ ಷರತ್ತಿಗೆ ಒಳಪಟ್ಟು, ಗಿಡದಕೊನೇನಹಳ್ಳಿ ಗ್ರಾಮದ ಸರ್ವೆ ನಂ. 5 ರಲ್ಲಿನ 45,540 ಚ.ಅ.ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಡಲಾಗಿದೆ.
ದಿನಾಂಕ: 21–09–2011 ರ ಕರ್ನಾಟಕ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿವಿಸಿ–19/2010–11 ರ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ಮಾರ್ಗಸೂಚಿ ದರದನ್ವಯ ಗಿಡದಕೊನೇನಹಳ್ಳಿ ಗ್ರಾಮದಲ್ಲಿನ ಕೃಷಿ ಜಮಿನಿಗೆ ಪ್ರತಿ ಎಕರೆಗೆ 100 ಲಕ್ಷ ರೂಗಳನ್ನು ನಿಗದಿಮಾಡಲಾಗಿದ್ದು, ಅದರಂತೆ ಭೂಸ್ವಾಧೀನ ಸ್ವತ್ತಿಗೆ ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**"ಭೂ ಪರಿಹಾರ ಮತ್ತು ಇತರೆ ವೆಚ್ಚಗಳು"**

| ಕ್ರ ಸಂ | ವಿವರಣೆ | ಮೊಬಲಗು(ರೂ.) |
|---|---|---|
| 1 | ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ 45,540 ಚ.ಅ. ವಿಸ್ತೀರ್ಣಕ್ಕೆ ಮಾರುಕಟ್ಟೆ ಬೆಲೆ ಎಕರೆ ಒಂದಕ್ಕೆ 100 ಲಕ್ಷ ರೂಗಳಂತೆ ಚ.ಅ.ಗೆ 230/– | **1,04,74,200/–** |
| 2 | **3 ಷೆಡ್‌ಗಳ ಮೌಲ್ಯ (ಕಾಮಗಾರಿ ಇಲಾಖೆಯ ವರದಿಯಂತೆ)** | **7,80,000/–** |
| | **ಒಟ್ಟು(1+2)** | **1,12,54,200/–** |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | **13,50,504/–** |
| | 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರ ಅನ್ವಯ ಶೇಕಡಾ 30 ರಂತೆ ಶಾಸನಬದ್ಧ ಭತ್ಯೆ | **33,76,260/–** |
| | (1+2+3) | **1,59,80,964/–** |
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | **ಕೈಬಿಡಲಾಗಿದೆ** |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | **ಕೈಬಿಡಲಾಗಿದೆ** |
| 6 | ಪ್ರಕಟಣಾ ವೆಚ್ಚ | **2,00,000/–** |
| | **ಒಟ್ಟು** | **1,61,80,964/–** |

**ಷರಾ:** ದಿನಾಂಕ: 5–9–1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಈಆ 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಒಂದು ಕೋಟಿ ಅರವತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರವತ್ನಾಲ್ಕು ರೂಗಳು ಮಾತ್ರ)**

ಈ ಪ್ರಕರಣದಲ್ಲಿ ಸ್ಥಳೀಯ ನಿವಾಸಿಗಳು ಸದರಿ ರಸ್ತೆ ನಿರ್ಮಾಣ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದು(ನಂ.15868/2011), ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಮೇಲ್ಕಂಡ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜು ಭೂಸ್ವಾಧೀನ ವೆಚ್ಚ ರೂ. **1,61,80,964/– (ಒಂದು ಕೋಟಿ ಅರವತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಅರವತ್ನಾಲ್ಕು ರೂಗಳು ಮಾತ್ರ)** ಗಳಾಗಲಿದ್ದು, ಈ ಪ್ರಕರಣದ ಸ್ವತ್ತುಗಳನ್ನು 1894ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಂಡು ಭೂ–ಪರಿಹಾರ ಮತ್ತು ಇತರೆ ವೆಚ್ಚಗಳನ್ನು 2011–12 ನೇ ಸಾಲಿನ ಆಯವ್ಯಯದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಾಮನ್ಯ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 30–03–2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12.04.2012ರ ನಿರ್ಣಯ.

***ನಿರ್ಣಯ :–*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ॥. 12.04.2012ರ ನಿರ್ಣಯವನ್ನು ಒಪ್ಪಿದೆ

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/58/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/525/11–12, ದಿನಾಂಕ : 28–02–2012 ರಲ್ಲಿ ವಿವರಿಸಿರುವಂತೆ, ಶ್ರೀ.ಮಹಮದ್ ಷರೀಫ್, ಓ.ಪಿ.ಹೆಚ್.ರಸ್ತೆ, ವಾರ್ಡ್ ನಂ.91 ರಲ್ಲಿ 9x5 ಅಡಿಗಳ ಜಾಗವನ್ನು ನಾಲಾ ರಸ್ತೆ ಸಿವಿಲ್ ಸ್ಟೇಷನ್ ಇಲ್ಲಿ ಬಂಕ್ ಶಾಪ್ ನಡೆಸಲು 01–11–1962 ರಿಂದ 30–09–1963ರ ವರೆಗೆ 11 ತಿಂಗಳ ಅವಧಿಗೆ ಮಾಸಿಕ ಗುತ್ತಿಗೆ ರೂ.7/– ಗಳಂತೆ ನಿಗದಿಪಡಿಸಿ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ಗುತ್ತಿಗೆ ಅವಧಿಯನ್ನು ನವೀಕರಿಸಿರುವುದಿಲ್ಲ. ಗುತ್ತಿಗೆ ಮೊತ್ತವನ್ನು 2003–04ನೇ ಸಾಲಿನ ವರೆಗೆ ಪಾವತಿಸಿರುವುದಾಗಿ ವರದಿ ಮಾಡಿರುತ್ತಾರೆ.

ಸಹ ಕಂದಾಯ ಅಧಿಕಾರಿ (ಶಿವಾಜಿನಗರ) ರವರ ವರದಿಯಂತೆ ಅರ್ಜಿದಾರರು ಗುತ್ತಿಗೆ ಅವಧಿ ನವೀಕರಿಸಲು ಪ್ರಸ್ತಾಪಿಸಿರುವ ಸ್ವತ್ತನ್ನು ಯಾವುದೇ ಉದ್ದೇಶಕ್ಕೆ ಪಾಲಿಕೆಗೆ ಅಗತ್ಯವಿಲ್ಲವೆಂದು ಗುತ್ತಿಗೆ ಅವಧಿಯನ್ನು ಮಾಸಿಕ ರೂ.500/– ರಂತೆ ನಿಗದಿಪಡಿಸಿ ನವೀಕರಿಸಲು ಆಸ್ತಿ ಶಾಖೆಗೆ ಕಡತ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಸ್ವತ್ತಿನ ಅಳತೆ 9X5=45 ಚದರ ಅಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.2200/– ಗಳಿದ್ದು, ವಾಣಿಜ್ಯಕ್ಕೆ ಶೇ 40% ರಷ್ಟು ಸೇರಿಸಿದ್ದಲ್ಲಿ ಚದರ ಅಡಿ ಒಂದಕ್ಕೆ 3080/– ರೂ ಗಳಾಗುತ್ತದೆ. 45 ಚದರ ಅಡಿಗಳಿಗೆ 1,38,600/– ರೂ. ಗಳಾಗುತ್ತದೆ. ಸ್ವತ್ತಿನ ಒಟ್ಟು ಮೌಲ್ಯದ ಶೇ 10% ರಂತೆ ಪರಿಗಣಿಸಿದ್ದಲ್ಲಿ ವಾರ್ಷಿಕ 13860/– ಮಾಸಿಕ 1155/– ರೂ ಗಳಾಗುತ್ತದೆ. 01–04–2004 ರಿಂದ ಕರಾರು ಪತ್ರ ನೊಂದಾಯಿಸುವ ದಿನಾಂಕದವರೆಗೆ ಹೊಸ ಕರಾರು ನೊಂದಾಯಿಸುವ ದಿನಾಂಕದಿಂದ ಮುಂದಿನ 3 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕ ದರ ನಿಗಧಿಪಡಿಸಿ ಗುತ್ತಿಗೆ ಅವಧಿ ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ನೀರ್ಣಯಕ್ಕಾಗಿ ಮಂಡಿಸಿಲಾದ ಟಿಪ್ಪಣಿ ಮೇರೆಗೆ, ತಾ॥. 28–02–2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು, ದರ ನಿಗಧಿಪಡಿಸಲು ತೆರಿಗೆ ಮತ್ತು ಆರ್ಥಿಕ ಸಮಿತಿಗೆ ಶಿಫಾರಸ್ಸು ಮಾಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 12–04–2012ರ ಟಿಪ್ಪಣಿ.

***ನಿರ್ಣಯ :–*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯವನ್ನು ಒಪ್ಪುತ್ತಾ, ದಿನಾಂಕ : 01–04–2004 ರಿಂದ ಕರಾರು ಪತ್ರ ನೊಂದಾಯಿಸುವ ದಿನಾಂಕದವರೆಗೆ ಮಾಸಿಕ ರೂ.500/– ಗಳಂತೆ ಹಾಗೂ ಹೊಸ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಮುಂದಿನ 3ವರ್ಷಗಳ ಅವಧಿಗೆ ಮಾಸಿಕ ರೂ.1155/– (ಒಂದು ಸಾವಿರದ ಒಂದು ನೂರ ಐವತ್ತೈದು ಮಾತ್ರ) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/60/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/30/11–12, ದಿನಾಂಕ : 05–03–2012 ರಲ್ಲಿ ವಿವರಿಸಿರುವಂತೆ, ಶ್ರೀ. ಭಾರತಿ ಸೇವಾ ಸಂಘ ಕಾರ್ಯದರ್ಶಿರವರಿಗೆ ಬಸವರಾಜ ಗಲ್ಲಿಯಲ್ಲಿ 10+16X30/2=390 ಚದರ ಅಡಿಗಳ ನಗರ ಪಾಲಿಕೆ ಜಾಗದ ಗುತ್ತಿಗೆ ಮಾಸಿಕ ರೂ.1/–ರಂತೆ 25–ವರ್ಷಗಳಿಗೆ ದಿನಾಂಕ:03–10–1960 ರಲ್ಲಿ ಶಾಲೆ ನಡೆಸುವ ಸಲುವಾಗಿ ಗುತ್ತಿಗೆ ನೀಡಲಾಗಿತ್ತು. ಸದರಿ ಸಂಸ್ಥೆಯರವರು 1991ರ ಜನವರಿ ಯಿಂದ ಸೆಪ್ಟೆಂಬರ್ 2011ರ ವರೆವಿಗೆ ಒಟ್ಟು ರೂ 249/– ಗಳನ್ನು ಬಾಕಿ ಇರುವ ಗುತ್ತಿಗೆ ಮೊತ್ತವನ್ನು ದಿನಾಂಕ:19–10–2011 ರಲ್ಲಿ ಪಾಲಿಕೆಗೆ ಪಾವತಿಸಿರುತ್ತಾರೆ. ಸದರಿ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸಿಕೊಡುವಂತೆ ದಿನಾಂಕ:12–12–2011 ರಲ್ಲಿ ಮನವಿ ನೀಡಿರುತ್ತಾರೆ.

ದಿನಾಂಕ:27–05–2011 ರಂದು ಸಹ ಕಂದಾಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಗಿದ್ದು, ಈ ಸೇವಾ ಸಂಘವು ತಮ್ಮದೇ ಆದ ಜಾಗದಲ್ಲಿ ಶಾಲೆ ನಡೆಸುತ್ತಿದ್ದು, ಪಾಲಿಕೆಯ ಗುತ್ತಿಗೆ ಜಾಗವು ಅದರ ಜಾಗಕ್ಕೆ ಲಗತ್ತಾಗಿದ್ದು, ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಿ ಉಪಯೋಗಿಸುತ್ತಿರುತ್ತಾರೆ.

ಸ್ಥಳೀಯರನ್ನು ವಿಚಾರಿಸಿದಾಗ ಈ ಶಾಲೆಯಿಂದ ಸ್ಥಳೀಯ ಬಡ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತಿದೆ ಎಂದು ಅಭಿಪ್ರಾಯಿಸಿರುತ್ತಾರೆ. ಆದುದರಿಂದ, ಈಗಿನ ಸರ್ಕಾರಿ ಮಾರ್ಗಸೂಚಿ ದರದಂತೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ರಿಯಾಯಿತಿ ದರದೊಂದಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಬಹುದಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು $\frac{10+16X30}{2}$=390 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21.09.2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1700/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 1700X390=6,63,000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.66,300/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.5525/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಭಾರತಿ ಸೇವಾ ಸಂಘ ಗುತ್ತಿಗೆ ಅವಧಿ ನವೀಕರಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ ಮೇರೆಗೆ, ತಾ||.05.03.2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17.04.2012ರ ನಿರ್ಣಯ.

***<u>ನಿರ್ಣಯ :–</u>*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–04–2012ರ ನಿರ್ಣಯವನ್ನು ಒಪ್ಪುತ್ತಾ, ದಿನಾಂಕ : 01–10–2011 ರಿಂದ ಮಾಸಿಕ ಗುತ್ತಿಗೆ ಮೊತ್ತ ರೂ.5525/– ರೂ.(ಐದು ಸಾವಿರದ ಐದುನೂರ ಇಪ್ಪತ್ತೈದು ಮಾತ್ರ) ಗಳನ್ನು ನಿಗಧಿಪಡಿಸಿ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***<u>08]. ವಿಷಯದ ಸಂಖ್ಯೆ :–ತೆಆಸ್ಥಾಸ/61/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/92/10–11, ದಿನಾಂಕ : 10–01–2012ರಲ್ಲಿ ವಿವರಿಸಿರುವಂತೆ, ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರು, ಸ್ವತ್ತಿನ ಸಂಖ್ಯೆ:10 (ಹಳೆದು–315), 2ನೇ ಅಡ್ಡರಸ್ತೆ ಎನ್.ಆರ್. ಕಾಲೋನಿ, ಈ ಸ್ವತ್ತನ್ನು ಪಾಲಿಕೆಯಿಂದ 1949 ರಲ್ಲಿ ಹರಾಜು ಮುಖಾಂತರ ಪಡೆದಿದ್ದು, ಕ್ರಯಪತ್ರ ಪಡೆಯದೆ ಇರುವುದರಿಂದ, ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತನ್ನು ಶ್ರೀಮತಿ.ಪಾರ್ವತಮ್ಮ 1949ರಲ್ಲಿ 40X60 ಅಡಿಗಳ ಸ್ವತ್ತನ್ನು 2600/–ರೂ.ಗಳಿಗೆ ಹರಾಜಿನ ಮೂಲಕ ಪಡೆದು ಆಗ್ರಿಮೆಂಟ್ ಪತ್ರವನ್ನು ಮಾಡಿಕೊಂಡಿರುತ್ತಾರೆ. ಹಣ ಪಾವತಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ಕ್ರಯಪತ್ರ ನೊಂದಾಯಿಸಿಕೊಂಡಿರುವುದಿಲ್ಲ. ಆದರೆ, ಆಗ್ರಿಮೆಂಟ್ ಪತ್ರದ ಆಧಾರ ಖಾತಾ ನೊಂದಾಯಿಸಿ ಕೊಂಡಿರುತ್ತಾರೆ. ಶ್ರೀಮತಿ.ಪಾರ್ವತಮ್ಮರವರು ಹಾಗೂ ಇವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿದ್ದು, ಇತರೇ ವಾರಸುದಾರರು ಶ್ರೀಮತಿ.ಪಾರ್ವತಮ್ಮನವರ ಮಗಳಾದ ಶ್ರೀಮತಿ.ಅಹಲ್ಯ ಚಿತ್ತರಂಜನ್‌ರವರಿಗೆ ನೊಂದಾಯಿತ ಜಿ.ಪಿ.ಎ. ಪತ್ರದ ಆಧಾರ ಅಧಿಕಾರ ನೀಡಿರುವುದರಿಂದ ಕ್ರಯಪತ್ರ ನೀಡಲು ಕೋರಿರುತ್ತಾರೆ.

ಈ ಸ್ವತ್ತಿನ ಒಟ್ಟು 40X60 ಅಡಿಗಳ ಹಿಂಭಾಗದ ಅಳತೆಯಲ್ಲಿ 16X40 ಅಡಿಗಳನ್ನು ಶ್ರೀ ವಿ.ಗುರುರಾಜ ರವರಿಗೆ ಕ್ರಯಪತ್ರದ ಮೂಲಕ ಕ್ರಯಕ್ಕೆ ನೀಡಿದ್ದು, 3X44 ಅಡಿಗಳು ಓಡಾಡಲು ದಾರಿ ಬಿಟ್ಟಿದ್ದು, ಉಳಿಕೆ 44X37 ಅಡಿಗಳಿರುತ್ತದೆ. ಶ್ರೀ.ವಿ.ಗುರುರಾಜರವರಿಗೆ 16X40 ಅಡಿಗಳಿಗೆ ಖಾತಾ ನೊಂದಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿ ಚದರ ಅಡಿ ಒಂದಕ್ಕೆ ರೂ.3000/–ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 1628 ಚ.ಅಡಿ ಗಳಾಗುತ್ತದೆ. ಇದರಂತೆ 3000X1628 = 48,84,000/– ರೂ.ಗಳಾಗುತ್ತದೆ.

ಸದರಿ ವಿಷಯದಲ್ಲಿ ಮೂಲ ಕಡತ ಲಭ್ಯವಿಲ್ಲದೇ ಇರುವುದರಿಂದ, ಶ್ರೀಮತಿ.ಪಾರ್ವತಮ್ಮ ಮತ್ತು ಅವರ ಪತಿಯಾದ ಶ್ರೀ ನಾರಾಯಣಸ್ವಾಮಿರವರು ಮರಣ ಹೊಂದಿರುವುದರಿಂದ ಮತ್ತು ಇತರೆ ವಾರಸುದಾರರಿಂದ ನೊಂದಾಯಿತ ಜಿ.ಪಿ.ಎ. ಪತ್ರದ ಮೂಲಕ ಅಧಿಕಾರ ಪಡೆದಿರುವ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರಿಗೆ ಸಂಪೂರ್ಣ ವಿಸ್ತೀರ್ಣಕ್ಕೆ ನೊಂದಾವಣೆ ಇಲಾಖೆಯ ದರ ಇತ್ಯಾದಿಗಳನ್ನು ಸರ್ಕಾರಕ್ಕೆ ಸಂದಾಯ ಮಾಡಿಸಿಕೊಂಡು ನೊಂದಾಯಿಸಲು ತದನಂತರ, ಶ್ರೀ ಗುರುರಾಜ್ ಇವರಿಗೆ

ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಎಲ್ಲಾ ದರಗಳನ್ನು ಸಂದಾಯ ಮಾಡಿ ನೊಂದಾಯಿಸಿ ಕೊಡುವ ಷರತ್ತು ವಿಧಿಸಿ ಕ್ರಯಪತ್ರ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ತಾ॥. 10.01.2012ರ ಆಯುಕ್ತರ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 12–04–2012ರ ನಿರ್ಣಯ.

**–ತಪಾಸಣೆಗಾಗಿ ಮುಂದೂಡಿದೆ–**

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/63/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಕಂ.ಅ(ಪೂ)ಮಾ/ಪಿಆರ್/327/11–12, ದಿನಾಂಕ : 18–05–2012 ರಲ್ಲಿ ವಿವರಿಸಿರುವಂತೆ, ನೇತಾಜಿ ಸುಭಾಷ ಚಂದ್ರ ಬೋಸ್ ಕಟ್ಟಡದ (ಪಿಯುಬಿ) 2ನೇ ಅಂತಸ್ತಿನಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರದ ಗುತ್ತಿಗೆಯನ್ನು 10ವರ್ಷಗಳ ಅವದಿಗೆ ಶೃಂಗಾರ್ ಸಿನಿಮಾಸ್ ಪ್ರೈವೇಟ್ ಲಿಮಿಟೆಡ್ (FAME) ರವರಿಗೆ ತಿಂಗಳು ಪರವಾನಗಿ ಶುಲ್ಕ ಆಧಾರದ ಮೇಲೆ ವಾರ್ಷಿಕ ಶೇ.3% ರಂತೆ ಹೆಚ್ಚಿನ ಪರಿಷ್ಕರಿಸುವ ಷರತ್ತಿಗೆ ಒಳಪಟ್ಟು ನೀಡಿ ದಿನಾಂಕ : 09–06–2007 ರಂದು ಸದರಿ ಸಂಸ್ಥೆಯವರಿಂದ ಕರಾರು ಮಾಡಿಕೊಳ್ಳಲಾಗಿರುತ್ತದೆ.

ಸದರಿ ಸಂಸ್ಥೆಯವರ ಕರಾರಿನಂತೆ ಮಾಸಿಕವಾಗಿ ಮೇ 2008 ರಿಂದ ಜುಲೈ 2008ರವರೆಗೆ ಪಾವತಿ ಮಾಡಿಕೊಂಡು ಬಂದಿರುತ್ತಾರೆ. ಆದರೆ ಆಗಸ್ಟ್ 2008 ರಿಂದ ಫೆಬ್ರವರಿ 2009ರವರೆಗೆ ಅಧಿಕ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲವೆಂದು ಪರವಾನಗಿ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುತ್ತಾರೆ.

ಆದರೆ ಸದರಿ ಚಿತ್ರಮಂದಿರಕ್ಕೆ 145ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದ್ದು, ಹೆಚ್ಚುವರಿಯಾಗಿ 335 ಕೆ.ವಿ.ಎ ವಿದ್ಯುತ್ ಸರಬರಾಜು ನೀಡಲು ದಿನಾಂಕ : 12–09–2007ರಂದು ಸದರಿ ಸಂಸ್ಥೆರವರು ಪತ್ರ ಸಲ್ಲಿಸಿರುತ್ತಾರೆ, ಈ ಬಗ್ಗೆ ಹೆಚ್ಚಿನ ವಿದ್ಯುತ್ ಸಂಪರ್ಕ ಕಲ್ಪಿಸಲು ಬಿಬಿಎಂಪಿ ವತಿಯಿಂದ ಬೆಸ್ಕಾಂ ಸಂಸ್ಥೆಗೆ ಬೇಡಿಕೆ ಸಲ್ಲಿಸಲಾಗಿರುತ್ತದೆ. ಅದರಂತೆ ಬೆಸ್ಕಾಂ ಸಂಸ್ಥೆಯವರು ಹಾಲಿ ಇರುವ ಟ್ರಾನ್ಸ್‌ಪಾರ್ಮರ್‌ಗಳನ್ನು ಕಟ್ಟಡದ ಹೊರಗಡೆ ಸ್ಥಳಾಂತರಿಸಿ, ಕೇಬಲ್ ವಿದ್ಯುತ್ ಸಲಕರಣೆಗಳನ್ನು ಹೊಸದಾಗಿ ಅಳವಡಿಸಲು ದಿನಾಂಕ : 31–01–2008 ರಂದು ತಿಳಿಸಿರುತ್ತಾರೆ. ಅದರಂತೆ ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಿ ದಿನಾಂಕ : 02–03–2009 ರಲ್ಲಿ 145ಕೆ.ವಿ.ಎ ವಿದ್ಯುತ್ ಹಾಗೂ ಹೆಚ್ಚುವರಿ 355ಕೆ.ವಿ.ಎ 500ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿರುತ್ತದೆ.

ಆದರೆ ಸದರಿ ಸಂಸ್ಥೆರವರು ಚಿತ್ರಮಂದಿರದ ಒಳಾಂಗಣದಲ್ಲಿ ಸಮಯದಲ್ಲಿ 145ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಉಪಯೋಗಿಸುತ್ತಿದ್ದರು. ಈ ಸಮಯದಲ್ಲಿ ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಕರು ಸದರಿ ಚಿತ್ರಮಂದಿರಕ್ಕೆ ತಪಾಸಣೆ ನಡೆಸಿ ಆಂತರಿಕ ವಿದ್ಯುತ್ ಕಾಮಗಾರಿ ಬಗ್ಗೆ ಹಲವಾರು ನ್ಯೂನತೆಗಳನ್ನು ಸರಿಪಡಿಸಲು ತಿಳಿಸಿರುತ್ತಾರೆ.

ಅಂತಿಮವಾಗಿ ದಿನಾಂಕ : 20–01–2009 ರಂದು ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಣಾಲಯ ಚಿತ್ರಮಂದಿರದ ಪ್ರದರ್ಶನಕ್ಕೆ ಅನುಮೋದನೆ ನೀಡಿರುತ್ತಾರೆ.

ಈ ಸಂದರ್ಭದಲ್ಲಿ ಆಗಸ್ಟ್ 2008 ರಿಂದ ಫೆಬ್ರವರಿ 2009ರ ಅವಧಿಯಲ್ಲಿ 145ಕೆ.ವಿ.ಎ ವಿದ್ಯುತ್ ಅನ್ನು ಸಂಪೂರ್ಣವಾಗಿ ಬಳಸಿಕೊಂಡಿರುವ ಮೇರೆಗೆ ಸದರಿ ಅವಧಿಯ ಬಾಕಿ ಪರವಾನಗಿ ಶುಲ್ಕ ರೂ.1,26,17,500.00 ಪಾವತಿಸಲು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ, ನಂತರ ದಿನಾಂಕ : 30–08–2010ರಲ್ಲಿ ಮನ್ನಾ ಮಾಡಲು ಬರುವುದಿಲ್ಲವೆಂದು, ಪಾವತಿಸಲು ಸೂಚಿಸಿರುತ್ತಾರೆ.

ಮುಂದುವರೆದಂತೆ ಕರಾರಿನ ಆರ್ಟಿಕಲ್ 6.1(ಎ) ರಂತೆ ಸದರಿ ಚಿತ್ರಮಂದಿರಕ್ಕೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿದ ನಂತರ ಬಾಕಿ ಪರವಾನಗಿ ಶುಲ್ಕ ಪಾವತಿಸಬೇಕಾಗಿರುತ್ತದೆಂದು ಸದರಿ ಸಂಸ್ಥೆರವರು ಬಾಕಿಯನ್ನು ಮನ್ನಾ ಮಾಡಲು ಕೋರಿರುತ್ತಾರೆ. ಆದರೆ ಆರ್ಟಿಕಲ್ 5.5(ಎ) ಮತ್ತು (ಬಿ)ರಲ್ಲಿ ಬಾಡಿಗೆದಾರರೇ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ಆಗಸ್ಟ್ 2008 ರಿಂದ ಫೆಬ್ರವರಿ 2009ರ ಅವಧಿಯಲ್ಲಿ 145 ಕೆ.ವಿ.ಎ ವಿದ್ಯುತ್ ಸರಬರಾಜನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದು, ಚಿತ್ರಮಂದಿರದವರ ಆಂತರಿಕ ವಿದ್ಯುತ್ ಕಾಮಗಾರಿಗಳ ಹಲವಾರು ನ್ಯೂನತೆಗಳಿಂದ ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಕ ಇಲಾಖೆಯಿಂದ ಪರವಾನಗಿ ಪಡೆಯಲು

ವಿಳಂಬದಿಂದ ಹಾಗೂ ನವೀಕರಣ ಮಾಡಿ ಪ್ರಾಧಿಕಾರಗಳಿಂದ ಪರವಾನಗಿ ಪಡೆಯಲು ಸದರಿ ಸಂಸ್ಥೆಯವರಿಂದಲೇ ವಿಳಂಬವಾಗಿದೆಯೇ ಹೊರತು, ಬಿಬಿಎಂಪಿ ವತಿಯಿಂದ ವಿಳಂಭವಾಗಿರುವುದಿಲ್ಲ. ಆದ್ದರಿಂದ ಸದರಿ ಚಿತ್ರಮಂದಿರದವರೇ ವಿಳಂಬ ನೀತಿ ಅನುಸರಿಸಿರುವ ಮೇರೆಗೆ ಬಾಕಿ ಬರಬೇಕಾಗಿರುವ ಪರವಾನಗಿ ಶುಲ್ಕ ರೂ.1,26,17,500.00 ಗಳನ್ನು ಹಾಗೂ ಆರ್ಟಿಕಲ್ ಆಪ್ 7.1 ರಂತೆ 2% ದಂಡದೊಂದಿಗೆ ಪಾವತಿಸಬೇಕಾಗಿದ್ದು, ಈ ಬಗ್ಗೆ ಅಂತಿಮ ನೋಟಿಸ್ ಜಾರಿಗೊಳಿಸಿ ಸದರಿ

ಚಿತ್ರಮಂದಿರದವರಿಂದ ಶೇವಣೆ ಮೊತ್ತ ರೂ.2,10,00,000.00ಗಳಲ್ಲಿ ಬಾಕಿ ಪರವಾನಗಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಆದೇಶ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮಾಹಿತಿಗಾಗಿ ಮುಂದೂಡಿದೆ–**

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/74/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(4)/ಪಿಆರ್/195ಎ/11–12, ದಿನಾಂಕ : 13–06–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಡ ಹಾಗೂ ಮಧ್ಯಮ ವರ್ಗದ ಆರ್ಥಿಕವಾಗಿ ಹಿಂದುಳಿದ ನಾಗರೀಕರು ವೈದ್ಯಕೀಯ ಚಿಕಿತ್ಸೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸುಮಾರು ಐದು (5) ಕೋಟಿಗಳಷ್ಟು ಹಣವನ್ನು ಹಾಗೂ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.8 ಕೋಟಿಗಳಷ್ಟು ಆಯವ್ಯಯದಲ್ಲಿ ಮೀಸಲಿಡಲಾಗುತ್ತಿರುತ್ತದೆ.

ತತ್ಸಂಬಂಧ, ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಯಿಂದ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಧನ ಸಹಾಯ ಕೋರಿ ಸಾರ್ವಜನಿಕರು ಅರ್ಜಿ ಸಲ್ಲಿಸುತ್ತಿದ್ದು, ಸಾರ್ವಜನಿಕರಿಗೆ / ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ಫಲಾನುಭವಿಗಳಿಗೆ ವೈದ್ಯಕೀಯ ಸಹಾಯ ಶೀಘ್ರವಾಗಿ ತಲುಪಲು ಅನುಕೂಲವಾಗುವಂತೆ ಉಲ್ಲೇಖಿತ–1, 2 ಮತ್ತು 3ರ ಆದೇಶಗಳಂತೆ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಹಾಗೂ ತಿದ್ದುಪಡಿ ಆದೇಶಗಳನ್ನು ಜಾರಿಗೆ ತಂದು ವೈದ್ಯಕೀಯ ಧನ ಸಹಾಯವನ್ನು ಬಿಡುಗಡೆ ಮಾಡಲಾಗುತ್ತಿರುತ್ತದೆ.

ಆದರೆ, ಈ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಮಂಜೂರು ಮಾಡುತ್ತಿರುವ ವೈದ್ಯಕೀಯ ಸಹಾಯ ಧನವು ದುರುಪಯೋಗವಾಗುತ್ತಿರುವುದಾಗಿ ಹಲವಾರು ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕರಿಂದ ದೂರುಗಳು ಬರುತ್ತಿರುತ್ತದೆ. ಈ ರೀತಿಯ ದುರುಪಯೋಗವನ್ನು ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಪಾಲಿಕೆಯ ವತಿಯಿಂದ ನೀಡುತ್ತಿರುವ ವೈದ್ಯಕೀಯ ಪರಿಹಾರ ಸಹಾಯ ಧನವು ಸಕಾಲದಲ್ಲಿ ಹಾಗೂ ಸೂಕ್ತ ರೀತಿಯಲ್ಲಿ ಸಹಾಯ ತಲುಪಲು ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಅಳವಡಿಸುವುದು ಅವಶ್ಯಕವಿದೆ. ಈ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳನ್ನೊಳಗೊಂಡಂತೆ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದೆ.

**<u>ವೈದ್ಯಕೀಯ ಧನ ಸಹಾಯ ಮಂಜೂರು ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು</u>**

1. ಅರ್ಜಿದಾರರು ತಾವು ಖಾಯಿಲೆಯಿಂದ ಬಳಲುತ್ತಿರುವ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯ ತಜ್ಞ ವೈದ್ಯರಿಂದ ದೃಢೀಕರಣ ಪತ್ರ ನೀಡಬೇಕು. ಈ ಪತ್ರದಲ್ಲಿ ಖಾಯಿಲೆಯ ಸ್ವರೂಪ, ಸದರಿ ಖಾಯಿಲೆಯ ಚಿಕಿತ್ಸೆಗೆ ವೆಚ್ಚವಾಗುವ ಅಂದಾಜು ಮೊತ್ತ ಇತ್ಯಾದಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಅರ್ಜಿದಾರರು ಸದರಿ ವೈದ್ಯಕೀಯ ದೃಢೀಕರಣ ಪ್ರಮಾಣ ಪತ್ರವನ್ನು ವೈದ್ಯರಿಂದ ಪಡೆದು, ಪಾಲಿಕೆಯು ನಿಗಧಿಪಡಿಸಿರುವ ನಮೂನೆಯಲ್ಲಿ ಭರ್ತಿಮಾಡಿ ಭಾವಚಿತ್ರದೊಂದಿಗೆ ಸಲ್ಲಿಸಬೇಕು.
2. ಧನ ಸಹಾಯವನ್ನು ಆಯಾ ಚಾಲ್ತಿ ಆರ್ಥಿಕ ವರ್ಷದ ಚಿಕಿತ್ಸೆಗೆ ಮಾತ್ರ (ಏಪ್ರಿಲ್ ಯಿಂದ ಮಾರ್ಚ್ ವರೆಗೆ) ನೀಡುವುದು. ಹಳೆಯ ವರ್ಷಗಳ ಬಿಲ್ಲುಗಳನ್ನು ಸಲ್ಲಿಸಿ, ವೈದ್ಯಕೀಯ ಧನ ಸಹಾಯವನ್ನು ಕೋರುವ ಪ್ರಕರಣವನ್ನು ತಿರಸ್ಕರಿಸುವುದು.
3. ಅರ್ಜಿದಾರರು ಸಹಾಯ ಧನ ಕೋರಿ ಸಲ್ಲಿಸುವ ಅರ್ಜಿಗಳನ್ನು ವಲಯ ಆರೋಗ್ಯ ಅಧಿಕಾರಿಗಳಿಗೆ ಕಳುಹಿಸಿ, ಸದರಿಯವರು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ನಮೂದಿಸಿ ಶಿಫಾರಸ್ಸು ಮಾಡಬೇಕು.
4. ಪೂಜ್ಯ ಮಹಾಪೌರರ ಹಾಗೂ ಪಾಲಿಕೆ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ಅನುದಾನವನ್ನು ಈ ಕೆಳಕಂಡ ವೈದ್ಯಕೀಯ ಚಿಕಿತ್ಸೆಗಳಿಗೆ ಮಾತ್ರ ಹಣವನ್ನು ಬಿಡುಗಡೆ ಮಾಡಲು ಹಾಗೂ ಈ ವೈದ್ಯಕೀಯ ಚಿಕಿತ್ಸೆಗಳಿಗೆ ಕನಿಷ್ಠ ರೂ.25,000/– ಗಳಿಂದ ಗರಿಷ್ಠ ರೂ.40,000/– ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ.
   (ಎ) ಹೃದಯ ಸಂಬಂಧಿ ಖಾಯಿಲೆಗಳೂ
   (ಬಿ) ಕ್ಯಾನ್ಸರ್
   (ಸಿ) ಕಿಡ್ನಿ ವೈಫಲ್ಯ
   (ಡಿ) ಮೆದುಳಿಗೆ ಸಂಬಂಧಿಸಿದ ಖಾಯಿಲೆ (ಬ್ರೈನ್ ಟ್ಯೂಮರ್)

(ಇ) ಇತರೆ ಪ್ರಮುಖ ಶಸ್ತ್ರಚಿಕಿತ್ಸೆಗೊಳಪಡುವ ಖಾಯಿಲೆಗಳು.

5. ವೈದ್ಯಕೀಯ ಅನುದಾನದ ಅಡಿಯಲ್ಲಿ ಮೇಲ್ಕಂಡ ಚಿಕಿತ್ಸೆಗಳನ್ನು ಹೊರತು ಪಡಿಸಿ ಇನ್ನುಳಿದ ಯಾವುದೇ ಧನ ಸಹಾಯ ನೀಡುವ ಮುನ್ನ ಪೂಜ್ಯ ಮಹಾಪೌರರಿಗೆ ಮಾಹಿತಿಯೊಂದಿಗೆ ಕಡತ ಸಲ್ಲಿಸಿ, ಅವರ ಅನುಮೋದನೆ ಪಡೆಯುವುದು ಹಾಗೂ ಸದರಿ ಚಿಕಿತ್ಸೆಗಳಿಗೆ ಕನಿಷ್ಠ ರೂ.10,000/- ಗಳಿಂದ ಗರಿಷ್ಠ ರೂ.20,000/- ಗಳನ್ನು ಬಿಡುಗಡೆ ಮಾಡಬಹುದಾಗಿರುತ್ತದೆ. ಇದೇ ರೀತಿ ಸದಸ್ಯರ ವಿವೇಚನಾಧಿನಕ್ಕೆ ಒಳಪಟ್ಟ ಅನುದಾನ ನೀಡುವಾಗಲು ಸಹ ಇದನ್ನು ಅಳವಡಿಸಿಕೊಳ್ಳುವುದು.

6. ಅಪಘಾತ ಪ್ರಕರಣಗಳಲ್ಲಿ ಮತ್ತು ಇತರೆ ಗಂಭೀರ ಖಾಯಿಲೆ ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರವನ್ನು ನೀಡಲು ಲಭ್ಯವಿರುವ ಬಿಲ್ಲುಗಳ ಆಧಾರದ ಮೇಲೆ ಪೂಜ್ಯ ಮಹಾಪೌರರು / ಪಾಲಿಕೆ ಸದಸ್ಯರು ಕನಿಷ್ಠ ಹಾಗೂ ಗರಿಷ್ಠ ಮೊತ್ತವನ್ನು ನಿರ್ಧರಿಸಬಹುದಾಗಿದೆ.

7. ಅಪಘಾತ ಪ್ರಕರಣಗಳಲ್ಲಿ ಪೋಲಿಸ್ ವರದಿಯನ್ನು ಪಡೆದು ಅಪಘಾತದ ಗಂಭೀರತೆಯ ಬಗ್ಗೆ ಸಂಬಂಧಪಟ್ಟ ಪ್ರದೇಶದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರವರಿಂದ ವೈದ್ಯಕೀಯ ಮೊತ್ತ ನೀಡುವ ಬಗ್ಗೆ ಸೂಕ್ತ ಶಿಫಾರಸ್ಸು ಪಡೆದು ರೋಗಿಯ ಬ್ಯಾಂಕ್‌ನ ಖಾತೆಗೆ ಚೆಕ್ ಅನ್ನು ನೀಡಬಹುದಾಗಿದೆ.

8. ಪ್ರಸ್ತಾಪಿತ ವೈದ್ಯಕೀಯ ಅನುದಾನಗಳ ಅಡಿಯಲ್ಲಿ ಸಾಮಾನ್ಯ ಖಾಯಿಲೆಗಳಿಗೆ ಧನ ಸಹಾಯ ನೀಡುವ ಪ್ರಸ್ತಾವನೆಗಳನ್ನು ತಿರಸ್ಕರಿಸುವುದು. (ಜ್ವರ, ನೆಗಡಿ, ಕೆಮ್ಮು, ದಮ್ಮು, ಆಯುರ್ವೇದಿಕ್ ಮಸ್ಸಾಜ್ ಚಿಕಿತ್ಸೆ ಹಾಗೂ ಇನ್ನಿತರೆ ಸಾಮಾನ್ಯ ಖಾಯಿಲೆಗಳು).

9. ಆಸ್ಪತ್ರೆಗಳಲ್ಲಿ ಹಾಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಅವರಿಂದ ಸೂಕ್ತ ದಾಖಲಾತಿಗಳನ್ನು ಪಡೆದು ನೇರವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ಪತ್ರ ಮುಖೇನ ಕಳುಹಿಸುವುದು. ಒಂದು ವೇಳೆ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಲ್ಲಿ, ಚಿಕಿತ್ಸೆಯನ್ನು ದೃಢಪಡಿಸಿಕೊಂಡ ಬಗ್ಗೆ ಅಗತ್ಯ ದಾಖಲೆಗಳನ್ನು ಪಡೆದು, ವಲಯ ಆರೋಗ್ಯ ವೈದ್ಯಾಧಿಕಾರಿಗಳ ಹಾಗೂ ಮುಖ್ಯ ಆರೋಗ್ಯ ಅಧಿಕಾರಿಗಳ ವರದಿ ಆಧಾರದ ಮೇಲೆ ಮೂಲ ಬಿಲ್ಲುಗಳನ್ನು ಪಡೆದು ರೋಗಿಯ ಅಥವಾ ಚಿಕಿತ್ಸೆ ಪಡೆದ ವಾರಸುದಾರರ ಬ್ಯಾಂಕ್‌ನ ಖಾತೆಯ ಸಂಖ್ಯೆಯ ಹೆಸರಿಗೆ ಚೆಕ್ ಅನ್ನು ನೀಡಬಹುದಾಗಿದೆ.

10. ವೈದ್ಯಕೀಯ ನಿಧಿಯಿಂದ ಮುಂಗಡ ಧನ ಸಹಾಯ ಕೋರಿ ಮನವಿ ಸಲ್ಲಿಸುವ ಪ್ರಕರಣಗಳಿಗೆ ಮಂಜೂರಾತಿಯ ಅರ್ಧ ಮೊತ್ತವನ್ನು ಮುಂಗಡವಾಗಿ ಆಸ್ಪತ್ರೆಯ ಹೆಸರಿಗೆ ಚೆಕ್ ಅನ್ನು ನೀಡಿ ನಂತರದಲ್ಲಿ ಆಸ್ಪತ್ರೆಯಿಂದ ನೀಡುವ ಮೂಲ ಬಿಲ್ಲುಗಳನ್ನು ಮತ್ತು ಡಿಸ್ಚಾರ್ಜ್ ವರದಿಯನ್ನು ಪಡೆದು ಉಳಿದ ಮೊತ್ತವನ್ನು ರೋಗಿಯು ಪಾವತಿಸಿದ್ದರೆ, ಆ ಹಣವನ್ನು ರೋಗಿಯ ಬ್ಯಾಂಕ್ ಖಾತೆಯ ಹೆಸರಿಗೆ ನೀಡುವುದು.

11. ವೈದ್ಯಕೀಯ ಪರಿಹಾರ ನಿಧಿಯಿಂದ ಸಹಾಯ ಧನ ಕೋರಿ ಮನವಿ ಸಲ್ಲಿಸುವ ಅರ್ಜಿದಾರರುಗಳು ಮೊದಲು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಪ್ರಾಶಸ್ತ್ಯ ನೀಡುವುದು, ಒಂದು ವೇಳೆ ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಿಲ್ಲದಿದ್ದಲ್ಲಿ ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

12. ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಕಡು ಬಡವರು, ಆರ್ಥಿಕವಾಗಿ ಹಿಂದುಳಿದವರು ಹಾಗೂ ಅಲ್ಪ ಸಂಖ್ಯಾತ ವರ್ಗದವರಿಗೆ ಅನುಕೂಲವಾಗುವಂತೆ ಚಿಕಿತ್ಸೆಯನ್ನು ಪಡೆಯಲು ಹಲವಾರು ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಪಾಲಿಕೆಯ ವತಿಯಿಂದ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡಲಾಗುತ್ತಿರುತ್ತದೆ. ಈ ಹಿನ್ನಲೆಯಲ್ಲಿ, ಪೂಜ್ಯ ಮಹಾಪೌರರ ವೈದ್ಯಕೀಯ ಧನ ಸಹಾಯ ಕೋರಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ಪಡೆದಿದ್ದಲ್ಲಿ ಅಂತಹವರ ಅರ್ಜಿಗಳನ್ನು ತಿರಸ್ಕರಿಸಬಹುದು. ಇಲ್ಲದಿದ್ದಲ್ಲಿ, ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಅಡಿಯಲ್ಲಿ ಹೆಲ್ತ್ ಕಾರ್ಡ್‌ಗಳನ್ನು ನೀಡದಿರುವ ಬಗ್ಗೆ ವಲಯ ಆರೋಗ್ಯ ವೈದ್ಯಾಧಿಕಾರಿಗಳು ದೃಢೀಕರಿಸಿ, ಫಲಾನುಭವಿಗಳಿಗೆ ವೈದ್ಯಕೀಯ ಧನ ಸಹಾಯ ನೀಡಲು ಮೇಲ್ಕಂಡ ಮಾರ್ಗಸೂಚಿಗಳನ್ವಯ ಕ್ರಮವಹಿಸುವುದು.

13. ಅರ್ಜಿದಾರರು ಸಲ್ಲಿಸುವ ಮನವಿಯನ್ನು ಪೂಜ್ಯ ಮಹಾಪೌರರ ಕಛೇರಿಯಿಂದ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿಗೆ ರವಾನಿಸಿ, ಆಯಾ ವಲಯದ ಆರೋಗ್ಯ ವೈದ್ಯಾಧಿಕಾರಿಗಳು ಅರ್ಜಿದಾರರ ಖಾಯಿಲೆ ಬಗ್ಗೆ ಆಸ್ಪತ್ರೆ / ವಾಸಸ್ಥಳಕ್ಕೆ ಭೇಟಿ ನೀಡಿ ಖಾಯಿಲೆ, ಖಾಯಿಲೆಯ ಸ್ವರೂಪ ಹಾಗೂ ನೈಜತೆಯ ಬಗ್ಗೆ ವರದಿ ಪಡೆದುಕೊಂಡು ಸರ್ಕಾರದ ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ಟಿಪ್ಪಣಿ ಹಾಳೆಯಲ್ಲಿ ಸಮರ್ಪಕವಾಗಿ ದೃಢೀಕರಿಸಿ, ಆರೋಗ್ಯ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ಮುಖ್ಯ ಆರೋಗ್ಯ ಅಧಿಕಾರಿಗಳ ಮುಖೇನ ಸಂಬಂಧಪಟ್ಟವರಿಗೆ ಮಂಡಿಸುವುದು. ಇದೇ ರೀತಿ

ಪಾಲಿಕೆ ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನ ನೀಡುವ ಬಗ್ಗೆ ವಲಯ ಆಯುಕ್ತರುಗಳು ಕ್ರಮವಹಿಸುವುದು

14. ವೈದ್ಯಕೀಯ ವೆಚ್ಚಗಳಿಗೆ ಪಾಲಿಕೆ ನಿಧಿಯಿಂದ ಅನುದಾನವನ್ನು ನೀಡುವಾಗ ಆಯಾ ಲೆಕ್ಕ ಶೀರ್ಷಿಕೆಗೆ ಮಾತ್ರ ಸೀಮಿತಗೊಳಿಸಬೇಕು ಹಾಗೂ ಈ ವೆಚ್ಚಗಳನ್ನು ಮಾಡಿರುವುದಕ್ಕೆ ಮೂಲ ಬಿಲ್ ಇತ್ಯಾದಿಯನ್ನು ಪಡೆದುಕೊಂಡು ಖಾತ್ರಿಪಡಿಸಿಕೊಂಡು ಸಹಾಯ ನೀಡುವುದು ಹಾಗೂ ಲೆಕ್ಕ ಪರಿಶೋಧನೆಗಾಗಿ ಸಂಬಂಧಪಟ್ಟ ಕಡತವನ್ನು ರಕ್ಷಿಸಿಡುವುದು.
15. ಈ ಪರಿಹಾರವನ್ನು ಆರ್ಥಿಕವಾಗಿ ದುರ್ಬಲವಾದ ವ್ಯಕ್ತಿ / ಕುಟುಂಬಗಳಿಗೆ ಮಾತ್ರ ನೀಡಬಹುದ್ದಾಗಿದ್ದು, ಈ ಬಗ್ಗೆ ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಅಥವಾ ರೂ.20,000/-ಗಳ ವಾರ್ಷಿಕ ಆದಾಯದ ಒಳಗೆ ಇರುವವರಿಗೆ ಮಾತ್ರ ನೀಡುವುದು ಹಾಗೂ ಅವರ ಆದಾಯ ಪ್ರಮಾಣ ಪತ್ರವನ್ನು ಪಡೆದು ನೀಡುವುದು.
16. ಪ್ರಸ್ತಾಪಿತ ಅನುದಾನದಡಿಯ ವೈದ್ಯಕೀಯ ಧನ ಸಹಾಯದ ಕಡತಗಳನ್ನು ಒಂದು (1) ವಾರದ ಒಳಗಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟವರು ಕ್ರಮವಹಿಸುವುದು.

ಈ ಮೇಲಿನಂತೆ ಮಾರ್ಗಸೂಚಿಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಪ್ರಯುಕ್ತ, ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ದಿನಾಂಕ : 13.06.2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.

## ***11]. ವಿಷಯದ ಸಂಖ್ಯೆ :-ತೆಆಸ್ಥಾಸ/76/2012-13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕೌಕಾ/ಪಿ.ಆರ್/52/2012-13, ದಿನಾಂಕ : 12.06.2012 ರಲ್ಲಿ ವಿವರಿಸಿರುವಂತೆ, ಶ್ರೀಮತಿ. ರಾಣಿ ರೇಖಾ, ಚಿತ್ರಕಲೆ ಕಲಾವಿದರು ನಂ.801/31, 1ನೇ ಎ ಮುಖ್ಯರಸ್ತೆ, ವೈಯಾಲಿ ಕಾವಲ್, ಬೆಂಗಳೂರು-560003 ರವರು ಮನವಿ ಸಲ್ಲಿಸಿ, ಸುಮಾರು 12 ವರ್ಷಗಳಿಂದ ಚಿತ್ರ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿದ್ದು, ಚಿತ್ರಕಲಾ ಪ್ರದರ್ಶನಗಳಿಗಾಗಿ ಹಲವು ಬಾರಿ ಲಂಡನ್, ಟರ್ಕಿ, ಆಸ್ಟ್ರೀಯ ಮುಂತಾದ ಸ್ಥಳಗಳಿಗೆ ಭೇಟಿ ನೀಡಿ ತಮ್ಮ ಕಲಾ ಪ್ರದರ್ಶನವನ್ನು ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಮುಂದುವರೆದಂತೆ, ಫ್ರಾಕ್‌ಫರ್ಟ್‌ನಲ್ಲಿ ಆಗಸ್ಟ್ 22 ರಿಂದ ಸೆಪ್ಟೆಂಬರ್ 23 ರವರೆಗೆ ಕಲಾ ಪ್ರದರ್ಶನವನ್ನು ನೀಡಲು ಆಹ್ವಾನ ನೀಡಿದ್ದು, ಅಲ್ಲಿಗೆ ಹೋಗಿ ಕಲಾ ಪ್ರದರ್ಶನ ನೀಡಲು ವಿದೇಶಿ ಪ್ರವಾಸದ ಖರ್ಚು ವೆಚ್ಚಗಳನ್ನು ಭರಿಸುವುದು ಕಷ್ಟವಾಗಿರುತ್ತದೆ. ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.1.00 ಲಕ್ಷ ಅನುದಾನವನ್ನು ನೀಡಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನ ನೀಡುತ್ತಲಿದ್ದು, ಪಾಲಿಕೆಯಲ್ಲಿ ಲಭ್ಯವಿರುವ ಹಣಕ್ಕೆ ಸೀಮಿತಗೊಳಿಸಿ ನೀಡುವ ನಿರ್ದೇಶನಗಳಿವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 1,275.00 ಲಕ್ಷಗಳು ಮೀಸಲಿಟ್ಟಿದೆ. ದಿನಾಂಕ:03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಆದರೆ. "ಶ್ರೀಮತಿ ರಾಣಿ ರೇಖಾ, ಚಿತ್ರಕಲಾವಿದೆ" ರವರಿಗೆ ಬಡ್ಜೆಟ್ ಪುಸ್ತಕದಲ್ಲಿ ಅನುದಾನ ನಿಗಧಿಪಡಿಸಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಶ್ರೀಮತಿ ರಾಣಿ ರೇಖಾ, ಚಿತ್ರಕಲಾವಿದೆರವರಿಗೆ ರೂ.25,000 ಸಾವಿರ ಅನುದಾನ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :-*** ದಿ॥. 12.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಮಾರ್ಪಡಿಸಿ ರೂ70,000/- (ಎಪ್ಪತ್ತು ಸಾವಿರ) ಅನುದಾನವನ್ನು ನೀಡುವುದೆಂದು ಸಮಿತಿ ತೀರ್ಮಾನಿಸಿದೆ.

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/77/2012–13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : CE/Elc/Est/04/12-13, ದಿನಾಂಕ : 16.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 128ರ ನಾಗರಭಾವಿ ಅರುಂಧತಿನಗರ ಕೊಳಚೆ ಪ್ರದೇಶದಲ್ಲಿನ ಪಾಲಿಕೆ ಕಟ್ಟಡದಲ್ಲಿ ATDC (Apparel Export Promotion Council) ಸಂಸ್ಥೆಯ ಸಹಭಾಗಿತ್ವದೊಂದಿಗೆ ಅಪೆರಲ್ ತರಬೇತಿ ಕೇಂದ್ರ ತೆರೆಯಲು ಉದ್ದೇಶಿಸಿ, ಸದರಿ ಕೇಂದ್ರಕ್ಕೆ ಅವಶ್ಯವಿರುವ ವಿದ್ಯುತ್ ಚಾಲಿತ ಹೊಲಿಗೆ ಯಂತ್ರಗಳು ಹಾಗೂ ಪೀಠೋಪಕರಣಗಳಿಗಾಗಿ ಈಗಾಗಲೇ ಸದರಿ ಸಂಸ್ಥೆಯವರಿಗೆ ಅನುದಾನವನ್ನು ಕಳೆದ ಮೂರು ತಿಂಗಳ ಹಿಂದೆ ಮಂಜೂರು ಮಾಡಲಾಗಿದ್ದು, ಸದರಿ ಕಟ್ಟಡಕ್ಕೆ 25 ಕೆವಿಎ ವಿದ್ಯುತ್ ಸಂಪರ್ಕವಿಲ್ಲದೆ ಕೇಂದ್ರವನ್ನು ಪ್ರಾರಂಭಿಸಲು ವಿಳಂಬವಾಗುತ್ತಿರುವುದಾಗಿ ಸ್ಥಳೀಯ ಪಾಲಿಕೆ ಸದಸ್ಯರು ವಿಷಾದ ವ್ಯಕ್ತಪಡಿಸಿರುವುದಾಗಿ ಜಂಟಿ ಆಯುಕ್ತರು (ಪಶ್ಚಿಮ) ರವರು ಆಂತರಿಕ ಕಛೇರಿ ಟಿಪ್ಪಣಿಯಲ್ಲಿ ತಿಳಿಸಿದ್ದು, ಟಿಪ್ಪಣಿಯ ಪ್ರತಿಯನ್ನು ಲಗತ್ತಿಸಲಾಗಿದೆ.

ಆದ್ದರಿಂದ, ಸದರಿ ಕೇಂದ್ರವನ್ನು ಪ್ರಾರಂಭಿಸಲು 25 ಕೆವಿಎ ವಿದ್ಯುತ್ ಸಂಪರ್ಕವನ್ನು ತುರ್ತಾಗಿ ಕಲ್ಪಿಸಬೇಕಾದ ಅವಶ್ಯಕತೆ ಇರುವುದರಿಂದ ಈ ಅಂದಾಜು ಪಟ್ಟಿಯ ಮೊತ್ತ ರೂ.5,00,000.00ಗಳಿಗೆ ಜಾಬ್ ಸಂಖ್ಯೆಯನ್ನು ನೀಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ದಿ॥. 16.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/78/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(ಸಿ1)ಪಿಆರ್/47/2011–12, ದಿನಾಂಕ : 31.05.2012 ರಲ್ಲಿ ವಿವರಿಸಿರುವಂತೆ, ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರು, ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ, ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಸರ್ಕಾರದ ಪತ್ರದಲ್ಲಿ ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 35 ಲೆಕ್ಕಾಧೀಕ್ಷಕರುಗಳ ಹುದ್ದೆಯು ಮಂಜೂರು ಆಗಿರುತ್ತದೆ.

ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರವು ದಿನಾಂಕ: 19–05–2005 ರ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುತ್ತದೆ. ಆದ್ದರಿಂದ ಲೆಕ್ಕಾಧೀಕ್ಷಕರ ಹುದ್ದೆಯು ಮಂಜೂರು ಆಗಿರುತ್ತದೆ.

ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರವು ದಿನಾಂಕ: 19–05–2005 ರ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುತ್ತದೆ. ಆದ್ದರಿಂದ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಕೆಳಕಂಡ ರೀತಿ ಭರ್ತಿ ಮಾಡಬೇಕಾಗಿರುತ್ತದೆ.

| ಹುದ್ದೆಯ ಪದನಾಮ | ತುಂಬುವ ವಿಧಾನ | ವಿದ್ಯಾರ್ಹತೆ |
|---|---|---|
| ಲೆಕ್ಕ ಅಧೀಕ್ಷಕರು<br>ವೇತನ ಶ್ರೇಣಿ<br>ರೂ. 10800–20025 | ಶೇ.50 ರಷ್ಟು ಹುದ್ದೆಯನ್ನು ರಾಜ್ಯ ಲೆಕ್ಕ ಪತ್ರ ಇಲಾಖೆ, ಕರ್ನಾಟಕ ಸರ್ಕಾರದಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳುವುದು.<br>ಶೇ. 50 ರಷ್ಟು ಹುದ್ದೆಯನ್ನು ಪಾಲಿಕೆಯ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಹುದ್ದೆಯ ಅನುಪಾತ 4:1 ರ ಅಡಿಯಲ್ಲಿ ಮುಂಬಡ್ತಿ ನೀಡಬೇಕಾಗಿದ್ದು, 5ನೇ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿಗೆ ಪರಿಗಣಿಸಬೇಕಾಗಿರುತ್ತದೆ. | ಕನಿಷ್ಠ 5–ವರ್ಷ ಸೇವೆಯನ್ನು ಅರ್ಹತೆ ಹೊಂದಿರುವ ಹುದ್ದೆಯಲ್ಲಿ ಸಲ್ಲಿಸತಕ್ಕದ್ದು, ಈ ಅರ್ಹತೆ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಕನಿಷ್ಠ 3–ವರ್ಷಗಳ ಸೇವೆ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸಬಹುದಾಗಿರುತ್ತದೆ.<br><u>ಇಲಾಖಾ ಪರೀಕ್ಷೆಗಳು:</u><br>1. ಎಸ್.ಎ.ಎಸ್ ಪರೀಕ್ಷೆ<br>2. ಕನ್ನಡ ಭಾಷಾ ಪರೀಕ್ಷೆ<br>3. ಅಕೌಂಟ್ಸ್ ಹೈಯರ್<br>4. ರೆವಿನ್ಯೂ ಹೈಯರ್<br>5. ಮುನಿಸಿಪಲ್ & ಲೋಕಲ್ ಬೋರ್ಡ್<br>6. ಜನರಲ್–ಲಾ |

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಲಿ ಇರುವ ಹುದ್ದೆಗಳು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ವಿವರಗಳು | ಮಂಜೂರಾಗಿರುವ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ | ಷರಾ |
|---|---|---|---|---|---|
| 1 | ಬಿ.ಬಿ.ಎಂ.ಪಿ | 18 | 8 | 10 | |
| 2 | ರಾಜ್ಯ ಲೆಕ್ಕಪತ್ರ ಇಲಾಖೆ | 17 | 40 | –23 | ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. |

ನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರು, ಇವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಸರ್ಕಾರವು ದಿನಾಂಕ: 18–02–2012 ರ ಪತ್ರದಲ್ಲಿ ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರ ಇವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಅಭಿಪ್ರಾಯ ನೀಡಲು ಕೋರಿರುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಷಯದ ಬಗ್ಗೆ ದೀರ್ಘವಾದ ಚರ್ಚೆ ನಂತರ ಆಯುಕ್ತರ ದಿನಾಂಕ:31.05.2012ರ ಟಿಪ್ಪಣಿಯಲ್ಲಿ ವಿವರಿಸಿರುವ ರೀತ್ಯಾ ಈ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಅಂತಿಮ ತೀರ್ಮಾನಕ್ಕೆ ಮಂಡಿಸಲು ನಿರ್ಣಯಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ : 14–06–2012ರ ನಿರ್ಣಯ.

***ನಿರ್ಣಯ :–*** ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿಯ ದಿನಾಂಕ 14.06.2012ರ ನಿರ್ಣಯವನ್ನು ಒಪ್ಪುತ್ತಾ, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವ ಬಗ್ಗೆ ಪಾಲಿಕೆ ಸಭೆಯ ತೀರ್ಮಾನಕ್ಕೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***14]. ವಿಷಯದ ಸಂಖ್ಯೆ :–ತೆಆಸ್ಥಾಸ/80/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ :ಎ3(1)/ಪಿ.ಆರ್/147/11–12, ದಿನಾಂಕ : 13.4.2012 ರಲ್ಲಿ ವಿವರಿಸಿರುವಂತೆ, ಶ್ರೀ. ಶಿವಲಿಂಗೇಗೌಡ ಬಿನ್ ಶ್ರೀ ಪೂಜಾರಿ ಕೋಡಿಗೌಡ ಬೆಂಗಳೂರು ರವರು ಪೀಣ್ಯ ಕೈಗಾರಿಕ ಪ್ರದೇಶದ ಪಿ.ಐ.ಎ ಭವನದ ಎದುರು ಇರುವ ಅಶ್ವತ್‌ಕಟ್ಟೆ ಪಕ್ಕದಲ್ಲಿ 10x10 ಅಡಿಗಳ ಜಾಗದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಸ್ಥಳಾವಕಾಶ ಕೋರಿ ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಉಪ ವ್ಯವಸ್ಥಾಪಕರು ತುಮಕೂರು ಹಾಗೂ ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ರವರು ಸಹ ಪ್ರಸ್ತುತ ಜಾಗದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಈ ಬಗ್ಗೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ನಗರ ಪಾಲಿಕೆ ಸದಸ್ಯರು ಶಿಫಾರಸ್ಸು ಪತ್ರ ನೀಡಿ ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ವರದಿಯಲ್ಲಿ ಸ್ಥಳೀಯ ನಿವಾಸಿಗಳಿಗೆ ಉಪಯೋಗಕ್ಕಾಗಿ ಪ್ರಸ್ತುತ ಪ್ರದೇಶದಲ್ಲಿ 10x10 ಅಡಿಗಳ ನಗರ ಪಾಲಿಕೆಯ ಜಾಗವನ್ನು ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಅನುಮತಿ ನೀಡುವ ಬಗ್ಗೆ ಪರಿಗಣಿಸಬಹುದೆಂದು ತಿಳಿಸಿರುತ್ತಾರೆ.

ಸದರಿ ಅರ್ಜಿದಾರರು ಕೋರಿರುವ ಸ್ಥಳದ ಬಗ್ಗೆ ಪಾದಚಾರಿ/ಸಾರ್ವಜನಿಕರಿಗೆ ಓಡಾಡಲು ತೊಂದರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪೋಲೀಸ್ ಇನ್ಸ್‌ಪೆಕ್ಟರ್, ಪೀಣ್ಯ ಸಂಚಾರಿ ಪೋಲೀಸ್ ಠಾಣೆ ರವರು ಸದರಿ ಸ್ಥಳದಲ್ಲಿ ವಾಹನಗಳು ಹಾಗೂ ಸಾರ್ವಜನಿಕರು ಓಡಾಡಲು ಯಾವುದೇ ತೊಂದರೆಯಾಗುವುದಿಲ್ಲ. ಆದ್ದರಿಂದ, ಸೂಕ್ತ ಮುಚ್ಚಳಿಕೆ ಆಧಾರದ ಮೇಲೆ ಅರ್ಜಿದಾರರಿಗೆ ಅನುಮತಿ ನೀಡಬಹುದಾಗಿದೆ ಎಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1500/– ಗಳಿರುತ್ತದೆ ಇದಕ್ಕೆ ಶೇ 40% ರಷ್ಟು ಹೆಚ್ಚಿಸಿದಾಗ 2100/– ಇದರಂತೆ ಲೆಕ್ಕಾಚಾರ ಮಾಡಲಾಗಿ, 2100x100=210000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ21000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.1750/– ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ಬೆಂಗಳೂರು ದಿ:02–06–2003ರಲ್ಲಿನ ಕ್ರಮ ಸಂಖ್ಯೆ: vi) ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ಅರ್ಜಿದಾರರಾದ ಶ್ರೀ.ಶಿವಲಿಂಗೇಗೌಡ ರವರು ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಅನುಮತಿ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಸೂಕ್ತ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ದಿನಾಂಕ 13–04–2012ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ ಸದರಿಯವರಿಗೆ ಗುತ್ತಿಗೆಗೆ ನೀಡಲು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–06–2012ರ ನಿರ್ಣಯ.

***<u>ನಿರ್ಣಯ :–</u>*** ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05.06.2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ 1750/– ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.

## ***<u>15]. ವಿಷಯದ ಸಂಖ್ಯೆ :–ತೆಆಸ್ಥಾಸ/81/2012–13</u>***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಅ.ಆ(ಪೂರ್ವ)ಪಿಆರ್/812/12–13, ದಿನಾಂಕ : 20.06.2012 ರಲ್ಲಿ ವಿವರಿಸಿರುವಂತೆ, ಬೆಂಗಳೂರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 1200.00 ಮೀ.ಮೀ ಎಂ.ಪಿ–3 ಪೈಪು ಅಳವಡಿಸಲು ರಸ್ತೆ ಅಗತೆವನ್ನು ದುರಸ್ಥಿಗೊಳಿಸುವ ಬಗ್ಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 22 ವಿಶ್ವನಾಥ ನಾಗೇನಹಳ್ಳಿ ವ್ಯಾಪ್ತಿಯ ಆಚಾರ್ಯ ಕಾಲೇಜು ಮುಖ್ಯ ರಸ್ತೆಯಲ್ಲಿ ಹಾಗೂ ಸಿ.ಐ.ಎಲ್ ಬಡಾವಣೆ ರಸ್ತೆಯಲ್ಲಿ 1200.00 ಮೀ.ಮೀ. ಎಂ.ಪಿ–3 ಪೈಪು ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಯನ್ನು ಅಗೆದು ದುರಸ್ಥಿಗೊಳಿಸದೇ ಹಾಗೇ ಬಿಟ್ಟಿರುತ್ತಾರೆ.

ಸದರಿ ರಸ್ತೆ ಅಗೆತದ ಸ್ಥಳವು ತಗ್ಗು ಪ್ರದೇಶವಾಗಿದ್ದು, ಸಾರ್ವಜನಿಕರಿಗೆ ರಸ್ತೆಯಲ್ಲಿ ಸಂಚರಿಸಲು ತೊಂದರೆ ಉಂಟಾಗಿರುತ್ತದೆ ಎಂದು ವಾರ್ಡ್ 22ರ ನಗರ ಪಾಲಿಕೆ ಸದಸ್ಯರು ದಿನಾಂಕ : 11.05.2012 ರಂದು ಪತ್ರ ಮುಖೇನ ದುರಸ್ಥಿಗೊಳಿಸಲು ಕೋರಿರುತ್ತಾರೆ.

ಆದ್ದರಿಂದ ಸದರಿ ರಸ್ತೆ ಅಗೆತದ ಭಾಗವನ್ನು ದುರಸ್ಥಿಗೊಳಿಸಿ ಯಥಾಸ್ಥಿತಿಗೆ ತರಲು ರೂ.33.76 ಲಕ್ಷಗಳ ಅಂದಾಜು ಪಟ್ಟಿಯನ್ನು ಕಾರ್ಯಪಾಲಕ ಅಭಿಯಂತರರು (ಹೆಬ್ಬಾಳ) ರವರು ತಯಾರಿಸಿ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ದುರಸ್ಥಿಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಂಸ್ಥೆಯವರು ಪಾಲಿಕೆಗೆ 33.76 ಲಕ್ಷಗಳನ್ನು ಡಿ.ಡಿ.ಸಂಖ್ಯೆ :099346 ದಿನಾಂಕ : 30.08.201 ರಂದು ಜಮಾ ಮಾಡಿರುತ್ತಾರೆ. ಆದುದರಿಂದ ಸದರಿ ಕಾಮಗಾರಿಯನ್ನು 2012–13ನೇ ಸಾಲಿನಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿ ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :–</u>*** ದಿನಾಂಕ : 20.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.

## ***<u>16]. ವಿಷಯದ ಸಂಖ್ಯೆ :–ತೆಆಸ್ಥಾಸ/82/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(3ಎ)ಸಿಪಿಆರ್/47/04–05/12–13, ದಿನಾಂಕ : 28.05.2012ರಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರು ಸದರಿಯವರ ಮನವಿ ದಿನಾಂಕ : 27–12–2011 ರಂತೆ ಮನವಿ ಸಲ್ಲಿಸಿ ಪಾಲಿಕೆಯಲ್ಲಿ ಉಪ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಉಪ ಕಾನೂನು ಅಧಿಕಾರಿ ಹುದ್ದೆಯ ಜೊತೆಯಲ್ಲಿ ಪಾಲಿಕೆಯ ವಿರುದ್ಧ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರ ಮುಂದೆ ದಾಖಲಾಗುವ

ಪ್ರಕರಣಗಳನ್ನು ಸಹ ನಿರ್ವಹಿಸಿರುವುದಾಗಿ ತಿಳಿಸಿ, ಸದರಿ ಪ್ರಕರಣಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ಕಾನೂನು ಕೋಶದ ಮುಖ್ಯಸ್ಥರ ವರದಿ ದಿನಾಂಕ : 13.01.2012ರ ವರದಿಯಲ್ಲಿ ಪ್ರಸ್ತುತ ಪಾಲಿಕೆಯ ವಿರುದ್ಧ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರ ಮುಂದೆ ದಾಖಲಾಗುವ ಪ್ರಕರಣಗಳು ಹೆಚ್ಚುತ್ತಿದ್ದು, ಇಂತಹ ಪ್ರಕರಣಗಳನ್ನು ನಿರ್ವಹಿಸಲು ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಒಬ್ಬರನ್ನು ನೇಮಿಸುವುದು ಅವಶ್ಯವಿರುತ್ತದೆ. ಆದ್ದರಿಂದ ಸದರಿ ಪ್ರಕರಣಗಳ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಬಿ.ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರಿಗೆ ಅನುಭವವಿದ್ದು ಇವರ ಅರ್ಜಿಯನ್ನು ಪರಿಗಣಿಸಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಕೋರಿರುತ್ತಾರೆ.

ಈ ಸಂಬಂಧ ಶ್ರೀ ಬಿ. ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರು, 1977ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ *ನಿಯಮಾವಳಿಗಳ* ನಿಯಮ 20(ಎ)ರನ್ವಯ ಪಾಲಿಕೆಯ ವಿರುದ್ಧ ದಾಖಲಾಗುವ ಕರ್ನಾಟಕ ಲೋಕಾಯುಕ್ತ ಮತ್ತು ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಿಸಲು, ವೇತನ ನಿಗಧಿ ಪಡಿಸಿ ಗುತ್ತಿಗೆ ಆಧಾರದ ಮೆಲೆ ನೇಮೀಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/83/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(4)/ಪಿಆರ್/195ಎ/11–12, ದಿನಾಂಕ : 20.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರುಗಳಿಗೆ ವೈದ್ಯಕೀಯ ಚಿಕಿತ್ಸೆಗಾಗಿ ``ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಿಗೆ ವೈದ್ಯಕೀಯ ವೆಚ್ಚಗಳು'' ಲೆಕ್ಕ ಶೀರ್ಷಿಕೆಯಡಿಯಲ್ಲಿ ಆಯವ್ಯಯದಲ್ಲಿ ಹಣವನ್ನು ಮೀಸಲಿಡಲಾಗುತ್ತಿದ್ದು, ಕಳೆದ 2011–12ನೇ ಸಾಲಿನ ಆಯವ್ಯಯದಲ್ಲಿ ರೂ.50 ಲಕ್ಷಗಳನ್ನು ಇದಕ್ಕಾಗಿ ಮೀಸಲಿಡಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರುಗಳು ತಮ್ಮ ಸ್ವಂತ ವೈದ್ಯಕೀಯ ಚಿಕಿತ್ಸೆಗಾಗಿ ಸದರಿ ಅನುದಾನದ ಅಡಿಯಲ್ಲಿ ವೈದ್ಯಕೀಯ ವೆಚ್ಚ ಭರಿಸಲು ಅರ್ಜಿ ಸಲ್ಲಿಸುತ್ತಿದ್ದಾರೆ. ಆದರೆ ಈ ಬಗ್ಗೆ ಪಾಲಿಕೆಯಲ್ಲಿ ಸೂಕ್ತ ಮಾರ್ಗಸೂಚಿಗಳು ಇರುವುದಿಲ್ಲ. ಈ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಇರುವ ವೈದ್ಯಕೀಯ ಚಿಕಿತ್ಸೆ ನಿಯಮಗಳಂತೆ ಪಾಲಿಕೆಯಯಲ್ಲೂ ಸಹ ಕೆಲವು ಅಗತ್ಯ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದೆ. ಆದ್ದರಿಂದ ಪಾಲಿಕೆ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿದೆ

1. ಪಾಲಿಕೆಯಿಂದ ಭರಿಸುವ ವೈದ್ಯಕೀಯ ವೆಚ್ಚ ಮರುಪಾವತಿಯು ನಗರ ಪಾಲಿಕೆಯ ಹಾಲಿ ಸದಸ್ಯರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.
2. ಪಾಲಿಕೆಯ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚದ ಮರು ಪಾವತಿಯನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮದನ್ವಯ ಅರ್ಹ ಮೊತ್ತಕ್ಕೆ ಮಾತ್ರ ಪಾವತಿಸಲಾಗುವುದು.
3. ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಸರ್ಕಾರವು ಗುರುತಿಸಿರುವ ಆಸ್ಪತ್ರೆಗಳಲ್ಲಿ ಮಾತ್ರ (ಅನುಬಂಧ–1) ಪಾಲಿಕೆಯ ಸದಸ್ಯರು ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ, ಸದರಿ ವೆಚ್ಚವನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮದನ್ವಯ ಮರು ಪಾವತಿಸಲಾಗುವುದು.
4. ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮದನ್ವಯ ರೋಗದ ಸಂಬಂಧ ಔಷಧ, ಎಕ್ಸ್‌ರೇ ಹಾಗೂ ಶಸ್ತ್ರಚಿಕಿತ್ಸೆಗಳು ಇವುಗಳಿಗೆ ಸಂಬಂಧಪಟ್ಟಂತೆ ಮಾತ್ರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲಾಗುವುದು. ಸಾಮಾನ್ಯ ಖಾಯಿಲೆಗಳಾದ ಜ್ವರ, ನೆಗಡಿ, ಕೆಮ್ಮು, ಆಯುರ್ವೇದಿಕ್ ಚಿಕಿತ್ಸೆ ಹಾಗೂ ಇತರೇ ಖಾಯಿಲೆಗಳಿಗೆ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸಲಾಗುವುದಿಲ್ಲ.
5. ಕಣ್ಣಿಗೆ ಹಾಗೂ ಹಲ್ಲಿಗೆ ಸಂಬಂಧಿಸಿದಂತೆ ಶಸ್ತ್ರ ಚಿಕಿತ್ಸೆಗಳಿಗೆ ಮಾತ್ರ ವೈದ್ಯಕೀಯ ವೆಚ್ಚವನ್ನು ಮರುಪಾವತಿಮಾಡಲಾಗುವುದು. ಆದರೆ, ಕಣ್ಣಿನ ಕನ್ನಡಕ, ಹಲ್ಲಿನ ಬಿಡಿ ಭಾಗಗಳು ಹಾಗೂ ಹೊಸ ಹಲ್ಲುಗಳನ್ನು ಅಳವಡಿಸಲು ತಗಲುವ ಮೊತ್ತವನ್ನು ಭರಿಸಲು ಅವಕಾಶ ಇರುವುದಿಲ್ಲ.

6. ನಗರ ಪಾಲಿಕೆಯ ಸದಸ್ಯರುಗಳು ವೈದ್ಯಕೀಯ ವೆಚ್ಚ ಮರು ಪಾವತಿಯನ್ನು ಆಯಯಾ ಆರ್ಥಿಕ ವರ್ಷದಲ್ಲಿಯೇ ಪಡೆಯಲು ಅರ್ಜಿ ಸಲ್ಲಿಸಬೇಕು ಹಾಗೂ ಹಿಂದಿನ ವರ್ಷದ ವೈದ್ಯಕೀಯ ವೆಚ್ಚಗಳ ಮರು ಪಾವತಿಯನ್ನು ಪಡೆಯಲು ಅರ್ಹರಿರುವುದಿಲ್ಲ.
7. ಪಾಲಿಕೆಯ ಸದಸ್ಯರುಗಳು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಅವರು ಆಸ್ಪತ್ರೆಗಳಲ್ಲಿ ದೊರೆಯುವ ಸಾಮಾನ್ಯ ವಸತಿ ಸೌಲಭ್ಯಗಳನ್ನು ಮಾತ್ರ ಪಡೆದಲ್ಲಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಆಗುವುದು. ಉನ್ನತ ದರ್ಜೆಯ ವಸತಿ ಸೌಲಭ್ಯಗಳನ್ನು ಪಡೆದಲ್ಲಿ, ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಅವಕಾಶ ಇರುವುದಿಲ್ಲ.
8. ನಗರ ಪಾಲಿಕೆ ಸದಸ್ಯರು ವೈದ್ಯಕೀಯ ಚಿಕಿತ್ಸೆಗೆ ಒಳರೋಗಿಗಳಾಗಿ ದಾಖಲಾದಲ್ಲಿ 48 ಘಂಟೆಯೊಳಗಾಗಿ ಪೂಜ್ಯ ಮಹಾಪೌರರಿಗೆ ಹಾಗೂ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಲಿಖಿತ ಮಾಹಿತಿಯನ್ನು ನೀಡಬೇಕು. ಈ ರೀತಿ ಮಾಹಿತಿ ನೀಡದಿದ್ದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಭರಿಸಲಾಗುವುದಿಲ್ಲ.
9. ನಗರ ಪಾಲಿಕೆ ಸದಸ್ಯರು ಆಸ್ಪತ್ರೆಗೆ ದಾಖಲಾಗಿ ವೈದ್ಯಕೀಯ ಚಿಕಿತ್ಸೆ ಪೂರ್ಣಗೊಂಡ ನಂತರದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಕೋರಿ ಅರ್ಜಿ ಸಲ್ಲಿಸಬೇಕು. ಸದರಿ ಅರ್ಜಿಯೊಂದಿಗೆ ನಗರ ಪಾಲಿಕೆ ಸದಸ್ಯರು ಆರೋಗ್ಯ ಸುಧಾರಣೆ ಪಡೆದಿರುವ ಬಗ್ಗೆ ಸಂಬಂಧಪಟ್ಟ ಆಸ್ಪತ್ರೆಯ ತಜ್ಞ ವೈದ್ಯರಿಂದ ದೃಢೀಕರಣ ಪತ್ರ ಹಾಗೂ ಮೂಲ ಬಿಲ್ಲುಗಳನ್ನು ಸಲ್ಲಿಸಬೇಕು. ಈ ಪತ್ರದಲ್ಲಿ ಖಾಯಿಲೆಯ ಸ್ವರೂಪ, ಸದರಿ ಚಿಕಿತ್ಸೆಗೆ ವೆಚ್ಚವಾಗಿರುವ ಮೊತ್ತ ಇತ್ಯಾದಿ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
10. ನಗರ ಪಾಲಿಕೆ ಸದಸ್ಯರು ವೈದ್ಯಕೀಯ ವೆಚ್ಚ ಮರುಪಾವತಿ ಕೋರಿ ಸಲ್ಲಿಸುವ ಅರ್ಜಿ ಮತ್ತು ಬಿಲ್ಲುಗಳನ್ನು ಕೌನ್ಸಿಲ್ ಕಾರ್ಯಾದರ್ಶಿಯವರು ವಲಯ ಆರೋಗ್ಯ ವೈದ್ಯಾಧಿಕಾರಿಗಳಿಗೆ ಕಳುಹಿಸುವುದು. ವಲಯ ಆರೋಗ್ಯ ವೈದ್ಯಾಧಿಕಾರಿಗಳು ಸದರಿಯವರ ವೈದ್ಯಕೀಯ ಬಿಲ್ಲುಗಳನ್ನು ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ನಿಯಮಗಳನ್ವಯ ಪರಿಶೀಲಿಸಿ ಅರ್ಹ ಮೊತ್ತದ ಬಗ್ಗೆ ವರದಿಯೊಂದಿಗೆ ಪಾವತಿಸಬೇಕಾದ ಮೊತ್ತವನ್ನು ನಮೂದಿಸಿ ಮೂಲ ಬಿಲ್, ಅವಶ್ಯಕ ದಾಖಲಾತಿಗಳನ್ನು ಪಡೆದು ವಲಯ ಆಯುಕ್ತರುಗಳ ಶಿಫಾರಸ್ಸಿನೊಂದಿಗೆ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಸಲ್ಲಿಸುವುದು. ನಂತರ ಕೌನ್ಸಿಲ್ ಕಾರ್ಯದರ್ಶಿಯವರು ಕಡತಗಳನ್ನು ಮಾನ್ಯ ಆಯುಕ್ತರ ಅನುಮೋದನೆಗೆ ಮಂಡಿಸಿ ಅವರಿಂದ ಸೂಕ್ತ ಆರ್ಥಿಕ ಮಂಜೂರಾತಿ ಪಡೆದು ಹಣವನ್ನು ಚೆಕ್ ಮೂಲಕ ಪಾಲಿಕೆ ಸದಸ್ಯರಿಗೆ ನೀಡಲು ಕಡತವನ್ನು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಕಳುಹಿಸುವುದು.
11. ನಗರ ಪಾಲಿಕೆ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವಾಗ ಆಯಾ ಲೆಕ್ಕ ಶೀರ್ಷಿಕೆಗೆ ಮತ್ತು ಮೊತ್ತಕ್ಕೆ ಮಾತ್ರ ಸೀಮಿತಗೊಳಿಸಬೇಕು ಹಾಗೂ ಈ ವೆಚ್ಚಗಳನ್ನು ಭರಿಸಿರುವುದಕ್ಕೆ ಮೂಲ ಬಿಲ್ ಇತ್ಯಾದಿಯನ್ನು ಪಡೆದುಕೊಂಡು ಖಾತ್ರಿಪಡಿಸಿಕೊಂಡು ಮರು ಪಾವತಿಸಬೇಕು ಹಾಗೂ ಲೆಕ್ಕ ಪರಿಶೋಧನೆಗಾಗಿ ಸಂಬಂಧಪಟ್ಟ ಕಡತವನ್ನು ರಕ್ಷಿಸಿಡುವುದು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ದಿ॥ 20.06.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

## ***18]. ವಿಷಯದ ಸಂಖ್ಯೆ :-ತೆಆಸ್ಥಾಸ/84/2012-13***

ವಿಶೇಷ ಆಯುಕ್ತರ ಟಿಪ್ಪಣಿ ದಿನಾಂಕ : 23.06.2012 ರಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳ ಮೇಲೆ ಜಾಹೀರಾತು ಫಲಕಗಳನ್ನು ಅಳವಡಿಸಿ ಪ್ರದರ್ಶಿಸಲು ಟೆಂಡರ್ ಕರೆಯುವ ಬಗ್ಗೆ ದಿನಾಂಕ : 08.03.2012 ರಂದು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 8 ಪ್ಯಾಕೇಜ್‌ನಂತೆ 967 ವಿದ್ಯತ್ ಕಂಬಗಳ ಮೇಲೆ ಜಾಹೀರಾತು ಫಲಕಗಳನ್ನು ಅಳವಡಿಸಿ ಪ್ರದರ್ಶಿಸಲು ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು. ಅದರಂತೆ ದಿನಾಂಕ : 13.04.2012ರಂದು ತಾಂತ್ರಿಕ ಬಿಡ್ ತೆರೆಯಲಾಗಿ ಸದರಿ ಟೆಂಡರ್‌ನಲ್ಲಿ ಏಕಮಾತ್ರ ಏಜೆನ್ಸಿಯವರು ಬಿಡ್ ಮಾಡಿರುತ್ತಾರೆ. ಈ ಸಂಬಂಧ ಟೆಂಡರ್‌ನ್ನು ಮರು ಇ-ಪ್ರಕ್ಯೂರ್‌ಮೆಂಟ್ ಮೂಲಕ ಎರಡನೇ ಬಾರಿ ಆಹ್ವಾನಿಸಲು ಆದೇಶಿಸಲಾಗಿತ್ತು. ಅದರಂತೆ ದಿನಾಂಕ : 24.03.2012ರಂದು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸದರಿ ಟೆಂಡರ್‌ನ್ನು ಎರಡನೇ ಬಾರಿ ಆಹ್ವಾನಿಸಲಾಗಿತ್ತು. ದಿನಾಂಕ : 31.05.2012ರಂದು ತಾಂತ್ರಿಕ ಬಿಡ್ ತೆರೆಯಲಾಗಿ ಸದರಿ ಟೆಂಡರ್‌ನಲ್ಲೂ ಸಹ ಏಕಮಾತ್ರ ಬಿಡ್ಡುದಾರರು ಭಾಗವಹಿಸಿದ್ದು, ಸದರಿ ಏಜೆನ್ಸಿರವರು ತಾಂತ್ರಿಕೆ ಬಿಡ್‌ಗೆ ಸಂಬಂಧಿಸಿದಂತೆ ಕೆಲವು ದಾಖಲಾತಿಗಳನ್ನು ನಮೂದಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎರಡನೇ ಬಾರಿಯೂ ತಾಂತ್ರಿಕ

ಬಿಡ್‌ನಲ್ಲಿ ಏಕಮಾತ್ರ ಏಜೆನ್ಸಿಯವರನ್ನು ಪರಿಗಣಿಸಿಲಾಗಲಿಲ್ಲ. ಈ ಸಂಬಂಧ ಎರಡನೇ ಬಾರಿಯೂ ಸದರಿ ಟೆಂಡರ್‌ನಲ್ಲಿ ಏಕಮಾತ್ರ ಬಿಡ್ಡುದಾರರು ತಾಂತ್ರಿಕ ಬಿಡ್‌ನಲ್ಲಿ ವಿಫಲವಾದ್ದರಿಂದ ಎರಡನೇ ಬಾರಿಯೂ ಸದರಿ ಟೆಂಡರ್‌ನಲ್ಲಿ ಯಾರೂಬ್ಬರೂ ಭಾಗವಹಿಸದೇ ಇರುವುದರಿಂದ ಸದರಿ ಟೆಂಡರ್‌ನ್ನು ರದ್ದು ಪಡಿಸುವ ಮುಂಚೆ ಪಾಲಿಕೆಯ ಸಭೆಯ ಮುಂದೆ ಒಂದು ಟಿಪ್ಪಣಿಯನ್ನು ಸಿದ್ದಪಡಿಸಿ ಮಂಡಿಸಲು ವಿಶೇಷ ಆಯುಕ್ತರು (ಯೋಜನೆ) ರವರು ಆದೇಶಿಸಿರುತ್ತಾರೆ.

ಆದುದರಿಂದ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳ ಮೇಲೆ ಜಾಹೀರಾತು ಫಲಕಗಳನ್ನು ಅಳವಡಿಸಿ ಪ್ರದರ್ಶಿಸುವ ಟೆಂಡರ್‌ನ್ನು ರದ್ದು ಪಡಿಸಬೇಕೆ ಅಥವಾ ಮೂರನೇ ಬಾರಿ ಟೆಂಡರ್ ಆಹ್ವಾನಿಸಬೇಕೇ ಎಂಬುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ದಿ॥. 23.06.2012ರ ವಿಶೇಷ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸುವಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳ ಮೆಲೆ ಜಾಹೀರಾತು ಫಲಕಗಳನ್ನು ಅಳವಡಿಸಿ ಪ್ರದರ್ಶಿಸುವ ಟೆಂಡರ್‌ನ್ನು ರದ್ದು ಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***19]. ವಿಷಯದ ಸಂಖ್ಯೆ :–ತೆಆಸ್ಥಾಸ/85/2012–13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಕೌಕಾ/ಪಿಆರ್/64/2012–13, ದಿನಾಂಕ : 25.06.2012 ರಲ್ಲಿ ವಿವರಿಸಿರುವಂತೆ, ಶ್ರೀಮತಿ. ಇಂದಿರಾ ಎಸ್.ಎಮ್., ಅಧ್ಯಕ್ಷರು, ಶ್ರೀ.ಧರ್ಮರಾಯ ಸ್ವಾಮಿ ದೇವಾಲಯ ವ್ಯವಸ್ಥಾಪನಾ ಸಮಿತಿ, ತಿಗಳರ ಪೇಟೆ, ಬೆಂಗಳೂರು–02 ರವರು ಮಾನ್ಯ ಆಯುಕ್ತರವರಿಗೆ ಮನವಿ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12ನೇ ಸಾಲಿನ ಕರಗ ಶಕ್ತ್ಯೋತ್ಸವ ಆಚರಣೆ ಮತ್ತು ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ರೂ.75.00 ಲಕ್ಷ ಅನುದಾನ ಕಾಯ್ದಿರಿಸಿದ್ದು, ಈ ಪೈಕಿ ಕರಗ ಶಕ್ತ್ಯೋತ್ಸವ ಆಚರಣೆಗೆ ಪ್ರಸಕ್ತ ಸಾಲಿನಲ್ಲಿ ದಿನಾಂಕ:03–04–2012 ರಂದು ರೂ.10 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸಮಾರಂಭದ ಖರ್ಚುಗಳನ್ನು ಭರಿಸಲು ಹಾಗೂ ಬಾಕಿ ಬಿಲ್ಲುಗಳನ್ನು ಪಾವತಿಸಲು ಇನ್ನು ಉಳಿಕೆ ರೂ.10 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 1,275.00 ಲಕ್ಷಗಳು ಮೀಸಲಿಟ್ಟಿದೆ. ದಿನಾಂಕ:03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಶ್ರೀ.ಧರ್ಮರಾಯ ಸ್ವಾಮಿ ದೇವಾಲಯಕ್ಕೆ ರೂ.5,00,000 ಲಕ್ಷ ಅನುದಾನ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ದಿ॥. 25.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.

## ***20]. ವಿಷಯದ ಸಂಖ್ಯೆ :–ತೆಆಸ್ಥಾಸ/86/2012–13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಕೌಕಾ/ಪಿಆರ್/65/2012–13, ದಿನಾಂಕ :25.06.2012ರಲ್ಲಿ ವಿವರಿಸಿರುವಂತೆ, ಶ್ರೀ. ಮುರುಳಿ ಹೆಚ್.ಆರ್, ರೈಡ್ ಎ ಸೈಕಲ್ ಫೌಂಡೇಷನ್ ನಂ.16, 35ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು ರವರು ಮಾನ್ಯ ಆಯುಕ್ತರವರಿಗೆ ಮನವಿ ಸಲ್ಲಿಸಿ Ride A Cycle Foundation ಎನ್ನುವ ಹೊಸ ಯೋಜನೆಯನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲಿರುವುದರಿಂದ, ವಿದ್ಯಾರ್ಥಿಗಳಿಗೆ, ನೌಕರರುಗಳಿಗೆ ಹಾಗೂ ಅತಿಥಿಗಳನ್ನು ಒಂದು ನಿಲ್ದಾಣದಿಂದ ಮತ್ತೊಂದು ನಿಲ್ದಾಣಗಳಿಗೆ ಸಾಗಿಸಲು ಈ ಹೊಸ ಯೋಜನೆಯು ಅನುಕೂಲಕರವಾಗಿರುವುದರಿಂದ ಹಾಗೂ ಇದರಿಂದ ಇಂಧನ ಉಳಿಸಿ ಬೆಂಗಳೂರನ್ನು ಸ್ವಚ್ಛ, ಆರೋಗ್ಯ, ಮಾಲಿನ್ಯ ರಹಿತ ನಗರಗಳಾಗಿ ನಿರ್ಮಿಸಲು ಹಾಗೂ ಈ ಯೋಜನೆಯಲ್ಲಿ ನಗರದ ವಿವಿಧ ಭಾಗಗಳಲ್ಲಿ ಸೈಕಲ್ ಸ್ಟೇಷನ್ ಗಳನ್ನು ಸ್ಥಾಪಿಸಲಿದ್ದು, ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಲು ಸೈಕಲ್ ಉಪಯೋಗಿಸಿ ಪ್ರಯಾಣಿಸಬಹುದೆಂದು ತಿಳಿಸಿದ್ದಾರೆ.

ಈಗಾಗಲೇ ಈ ಸಂಸ್ಥೆಯು ಈ ಯೋಜನೆಯನ್ನು ಅನುಷ್ಠಾನಗೊಳಿಸಲು Indian Institute of Science ರವರ ಜೊತೆ ಒಡಂಬಡಿಕೆ ಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ. ಈ ಯೋಜನೆಗೆ Centre for infrastructure, Sustainable Transportation and Urban Planning ರವರು ಈ ಯೋಜನೆಗೆ ಹಣಕಾಸಿನ ಸಹಾಯ ಮಾಡುತ್ತಿದ್ದು, ರೂ.30.00 ಲಕ್ಷ ಖರ್ಚಾಗಲಿದ್ದು, ಬಿ.ಬಿ.ಎಂ.ಪಿ ವತಿಯಿಂದ ರೂ.5.00 ಲಕ್ಷ ಅನುದಾನವನ್ನು ನೀಡಲು ಕೋರಿದ್ದಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನ ನೀಡುತ್ತಲಿದ್ದು, ಪಾಲಿಕೆಯಲ್ಲಿ ಲಭ್ಯವಿರುವ ಹಣಕ್ಕೆ ಸೀಮಿತಗೊಳಿಸಿ ನೀಡುವ ನಿರ್ದೇಶನಗಳಿವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 1,275.00 ಲಕ್ಷಗಳು ಮೀಸಲಿಟ್ಟಿದೆ. ದಿನಾಂಕ:03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, Ride A Cycle Foundation ರವರ ನವೀನ ಮಾದರಿಯ ಯೋಜನೆಗೆ ರೂ.5,00,000 ಲಕ್ಷ ಅನುದಾನ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :–</u>*** ತಾ॥. 25.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.

## ***21]. ವಿಷಯದ ಸಂಖ್ಯೆ :–ತೆಆಸ್ಥಾಸ/87/2012–13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಬಿಬಿಎಂಪಿ(ಆಕ)ಸಂಖ್ಯೆ:1432/ಕ.ಅ.ಸೇ/12–13, ದಿನಾಂಕ : 25.06.2012ರಲ್ಲಿ ವಿವರಿಸಿರುವಂತೆ, ಶ್ರೀಮತಿ ಹೆಚ್.ಎಸ್.ಲಲಿತಾ, ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ : 162 ಗಿರಿನಗರದಲ್ಲಿ ಹೊಲಿಗೆ ತರಬೇತಿ ಕೇಂದ್ರವನ್ನು ತೆರೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಸ್ಥಳವಿಲ್ಲದಿರುವುದರಿಂದ ನನ್ನ ವಾರ್ಡಿಗೆ ಸಂಬಂಧಪಟ್ಟ ಶ್ರೀ. ಆಂತೋಣಪ್ಪ (ಮಾಲೀಕರು) #.62, 80 ಅಡಿ ರಸ್ತೆ, ಗಿರಿನಗರ 2ನೇ ಹಂತ, ಶ್ರೀನಿವಾಸನಗರ, ಬೆಂ–85 ರಲ್ಲಿ ಖಾಸಗಿ ಕಟ್ಟಡದ ವ್ಯವಸ್ಥೆಯನ್ನು ಮಾಡಿದ್ದು, ಬಾಡಿಗೆ ಆಧಾರದಲ್ಲಿ ತೆಗೆದುಕೊಂಡು ಹೊಲಿಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ : 29.01.2011ರ ನಿರ್ಣಯದಂತೆ ಅವಶ್ಯಕತೆಗೆ ತಕ್ಕಂತೆ ಎರಡು ಕೇಂದ್ರಗಳನ್ನು ಮೀರದಂತೆ ಒಂದನ್ನು ಉಳಿಸಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಪ್ರತಿ ವಾರ್ಡಿಗೆ ಒಂದರಂತೆ ವಿಂಗಡಿಸಿ, ಆಯಾಯ ವಾರ್ಡ್‌ನ ನಗರ ಸಭಾ ಸದಸ್ಯರು ಸೂಚಿಸಿರುವ ಸ್ಥಳದಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು, ವಾರ್ಡಿನ ವ್ಯಾಪ್ತಿಯಲ್ಲಿ ನಗರ ಪಾಲಿಕೆಯ ಕಟ್ಟಡ ಇಲ್ಲದಿದ್ದ ಪಕ್ಷದಲ್ಲಿ ಕಟ್ಟಡವನ್ನು ಬಾಡಿಗೆಗೆ ಪಡೆದು ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಪಾಲಿಕೆ ಸಭೆಯಲ್ಲಿ ತೀರ್ಮಾನವಾಗಿರುತ್ತದೆ.

ಅದರಂತೆ, ವಾರ್ಡ್ ಸಂಖ್ಯೆ : 162 ಗಿರಿನಗರದಲ್ಲಿ ಪಾಲಿಕೆಯ ಯಾವುದೇ ಕಟ್ಟಡಗಳು ಇಲ್ಲದೇ ಇರುವುದರಿಂದ ಸದರಿ ವಾರ್ಡ್‌ನಲ್ಲಿ ಕಟ್ಟಡವನ್ನು ಬಾಡಿಗೆ ಪಡೆದು ಹೊಲಿಗೆ ತರಬೇತಿಯನ್ನು ನಡೆಸಲು ಅಧೀಕ್ಷಕ ಅಭಿಯಂತರರು (ದಕ್ಷಿಣ), ಮುಖ್ಯ ಅಭಿಯಂತರರು (ದಕ್ಷಿಣ), ಅಪರ ಆಯುಕ್ತರು (ಯೋಜನೆ) ರವರು ಪ್ರಸ್ತಾಪಿಸಿರುವ ಸ್ಥಳಕ್ಕೆ ಮಾಹೆಯಾನ ರೂ.8500/– (ರೂ.ಎಂಟು ಸಾವಿರದ ಐನ್ನೂರು ಮಾತ್ರ) ಗಳನ್ನು ನೀಡಬಹುದೆಂದು ಮುಖ್ಯ ಅಭಿಯಂತರರು (ದಕ್ಷಿಣ) ರವರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಶ್ರೀ. ಆಂತೋಣಪ್ಪ (ಮಾಲಿಕರು) #62, 80 ಅಡಿ ರಸ್ತೆ, ಗಿರಿನಗರ 2ನೇ ಹಂತ, ಶ್ರೀನಿವಾಸನಗರ, ಬೆಂ–85ರ ವಿಳಾಸದ ಕಟ್ಟಡಕ್ಕೆ ಮಾಹೆಯಾನ ರೂ.8500/–ಗಳನ್ನು ಬಾಡಿಗೆಯಾಗಿ ನಿಗದಿಪಡಿಸಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :–</u>*** ದಿ॥. 25.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.

## 22]. ವಿಷಯದ ಸಂಖ್ಯೆ :–ತೆಆಸ್ಥಾಸ/88/2012–13

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ :23.06.2012ರಲ್ಲಿ ವಿವರಿಸಿರುವಂತೆ, ಮಾನ್ಯ ಶ್ರೀ.ಜಿ.ಹೆಚ್.ರಾಮಚಂದ್ರ, ಅಧ್ಯಕ್ಷರು, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ವಾರ್ಡ್ ನಂ.160ರ ಬಿಬಿಎಂಪಿ ಸದಸ್ಯರವರು ದಿ: 26.01.2012 ರಂದು ಮಾನ್ಯ ಆಯುಕ್ತರವರಿಗೆ ಪತ್ರ ನೀಡಿ ರಾಜರಾಜೇಶ್ವರಿ ನಗರ ಉಪವಿಭಾಗದ ವಾರ್ಡ್ ನಂ.160 ರಾಜರಜೇಶ್ವರಿ ನಗರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿದ್ದು, ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುತ್ತದೆ ಎಂದು ತಿಳಿಸಿ ಇನ್ನು ಅಭಿವೃದ್ದಿಯಾಗಬೇಕಾದ ಬಡಾವಣೆಗಳಾದ ಜವರೇಗೌಡನಗರ, ಪಂತರಪಾಳ್ಯ, ಗಟ್ಟಿಗೆರೆ, ಕೆಂಚೇನಹಳ್ಳಿ, ಬಿಹೆಚ್ಇಎಲ್ ಬಡಾವಣೆ, ಬಂಗಾರಪ್ಪನಗರ, ಪ್ರಮೋದ್ ಬಡಾವಣೆ, ಕೆರೆಕೋಡಿಪಾಳ್ಯ, ಚನ್ನಸಂದ್ರ, ಹಲಗೆವಡೆರಹಳ್ಳಿ, ವೆಂಕಟೇಶಪ್ಪ ಬಡಾವಣೆ, ಚನ್ನಸಂದ್ರ ಕಾಲೋನಿ, ಮುನೇಶ್ವರ ನಗರ, ಈ ಪ್ರದೇಶಗಳಲ್ಲಿ ಅತಿಯಾದ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಸದರಿ ಪ್ರದೇಶಗಳಲ್ಲಿ ಒಟ್ಟು 18 ಕೊಳವೆಬಾವಿಗಳನ್ನು ಕೊರೆಯಲು ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

ಸದರಿ ಪತ್ರದ ಮೇಲೆ ಮಾನ್ಯ ಆಯುಕ್ತರು ''ಪರಿಶೀಲಿಸಿ ಕಡತದಲ್ಲಿ ಮಂಡಿಸಿ'' ಎಂದು ಸೂಚಿಸಿದ್ದ ಮೇರೆಗೆ 18 ಬೋರ್‌ವೆಲ್‌ಗಳನ್ನು ಕೊರೆದು ವಿದ್ಯುತೀಕರಣ ಒಳಗೊಂಡಂತೆ ನೀರು ಸರಬರಾಜು ವ್ಯವಸ್ಥೆಗೆ ಬೇಕಾದ ಎಲ್ಲಾ ಅಂಶಗಳನೊಳಗೊಂಡಂತೆ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ. ರಾಜರಾಜೇಶ್ವರಿ ನಗರದ ಅಪರ ಆಯುಕ್ತರು ಹಾಗೂ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಮೌಖಿಕ ಆದೇಶದನ್ವಯ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ರವರು ದಿನಾಂಕ : 17.03.2012 ರಲ್ಲಿ KRIDL ಸಂಸ್ಥೆಗೆ ಕೆಲಸವನ್ನು ವಹಿಸಿ ಲೆಟರ್ ಆಫ್ ಇನ್‌ಟೆಂಟ್ ಅನ್ನು ನೀಡಿರುತ್ತಾರೆ. ವಾರ್ಡ್–160ರ ನಗರಸಭಾ ಸದಸ್ಯರು 26 ಬೋರ್‌ವೆಲ್‌ಗಳನ್ನು ಕೊರೆಸಲು ಲೆಟರ್ ಆಫ್ ಇನ್‌ಟೆಂಟ್ ಅನ್ನು ನೀಡಿರುವುದನ್ನು ಸ್ಥಿರೀಕರಿಸಲು ಖುದ್ದಾಗಿ ಕೋರಿರುತ್ತಾರೆ.

ಈಗಾಗಲೇ ಈ ವಾರ್ಡ್‌ಗೆ 2011–12ನೇ ಸಾಲಿನಲ್ಲಿ ರೂ.50 ಲಕ್ಷ ಅನುದಾವನ್ನು ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ವಾರ್ಡಿನ ಪಾಲಿಕೆ ಸದಸ್ಯರು ಈ ಪ್ರದೇಶದಲ್ಲಿ ಬಹಳ ನೀರಿನ ಸಮಸ್ಯೆ ಇರುವ ಪ್ರಯುಕ್ತ ಇನ್ನು ಹೆಚ್ಚುವರಿ 26 ಬೋರ್‌ವೆಲ್‌ಗಳನ್ನು ಕೊರೆಯಿಸಲು ಅಂದಾಜು ವೆಚ್ಚ ರೂ.122 ಲಕ್ಷ ಬರುತ್ತದೆ. 2012–13ನೇ

ಸಾಲಿನ ಆಯವ್ಯಯದ ಪ್ರಸ್ತಾವನೆಗಳು ತಯಾರಿಕೆ ಹಂತದಲ್ಲಿರುವ ಪ್ರಯುಕ್ತ ಯಾವ ಲೆಕ್ಕಶೀರ್ಷಿಕೆಯಡಿ ಹೆಚ್ಚುವರಿ ಹಣವನ್ನು ಭರಿಸಬೇಕೆಂಬುದು ನಿರ್ಧರಿಸಬೇಕಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ನಿರ್ದಾರಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** 2012–13ನೇ ಸಾಲಿನ ಆಯವ್ಯಯ ಈಗಾಗಲೇ ಮಂಡನೆ ಆಗಿರುವುದರಿಂದ ಆಯವ್ಯಯದಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

## 23]. ವಿಷಯದ ಸಂಖ್ಯೆ :–ತೆಆಸ್ಥಾಸ/89/2012–13

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(6ಎ)ಪಿಆರ್/132/2011–12, ದಿನಾಂಕ : 26.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜು ನಿರ್ಮಾಣ ನಿಗಮ ನಿಮಿತ ಕಿರಿಯ/ ಸಹಾಯಕ ಅಭಿಯಂತರರುಗಳನ್ನು ಪಾಲಿಕೆ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರುಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ರವರಿಗೆ ಮನವಿ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವಂತೆ ಕೋರಿರುವ ಮೇರೆಗೆ ಸದರಿಯವರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ

ಇರುವ ಹುದ್ದೆಗಳಲ್ಲಿ ವಿಲೀನಗೊಳಿಸಲು ನಿಗಮದ ಅಭ್ಯಂತರವಿಲ್ಲವೆಂದು ಹಾಗೂ ಸದರಿಯವರುಗಳ ಮನವಿಯನ್ನು ಪರಿಗಣಿಸಲು ನಿಗಮದಿಂದ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂಖ್ಯೆ : ಆಡಳಿತ–2/2007–08/ 1171, ದಿ: 17–12–2007 ಮತ್ತು 11–02–2008ರ ರೀತ್ಯಾ ಪತ್ರವನ್ನು ಬರೆಯಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರವು, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 31 ಎಂಎನ್‌ವೈ 2008, ದಿನಾಂಕ : 11–04–2008 ಮತ್ತು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 299 ಎಂಎನ್‌ವೈ 2008, ದಿನಾಂಕ : 22–07–2008 ಪತ್ರಗಳಲ್ಲಿ ಈ ಕೆಳಕಂಡ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಕೋರಿರುತ್ತಾರೆ.

1. ಶ್ರೀ ಆರ್.ಟಿ. ಸುರೇಶ್‌ಬಾಬು. ಸಹಾಯಕ ಅಭಿಯಂತರರು
2. ಶ್ರೀ. ಜಿ. ನಾಗಭೂಷಣ್, ಸಹಾಯಕ ಅಭಿಯಂತರರು
3. ಶ್ರೀ. ಆರ್. ಬೆನಕೇಶ್, ಸಹಾಯಕ ಅಭಿಯಂತರರು
4. ಶ್ರೀ. ಹೆಚ್.ಎಂ. ತಿಮ್ಮಪ್ಪ, ಕಿರಿಯ ಅಭಿಯಂತರರು
5. ಶ್ರೀ. ಕೆ.ಜಿ ಸುಂದರೇಶ್. ಕಿರಿಯ ಅಭಿಯಂತರರು
6. ಶ್ರೀ. ಎಸ್.ಎಲ್. ಅಶ್ವಥ್. ಸಹಾಯಕ ಅಭಿಯಂತರರು
7. ಶ್ರೀ. ಎಸ್. ವಿಶ್ವನಾಥ್, ಸಹಾಯಕ ಅಭಿಯಂತರರು
8. ಶ್ರೀ. ಬಿ. ರಮೇಶ್, ಕಿರಿಯ ಅಭಿಯಂತರರು
9. ಶ್ರೀ ರವೀಂದ್ರನಾಥ್. ಸಹಾಯಕ ಅಭಿಯಂತರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ/ಕಿರಿಯ ಅಭಿಯಂತರರುಗಳ ಕೊರತೆ ಇದ್ದು, ಕರ್ನಾಟಕ ನಿರ್ಮಾಣ ನಿಗಮ ನಿಯಮಿತದ ಅಭಿಯಂತರರುಗಳನ್ನು ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಹಾಗೂ ಇತರೆ ಇಲಾಖೆಗಳಲ್ಲಿ ವಿಲೀನಗೊಳಿಸಿರುವುದರಿಂದ ಹಾಗೂ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ

ನಿಯಮಾವಳಿಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ ಈ ಕೆಳಕಂಡ ಷರತ್ತುಗೊಳಪಡಿಸಿ, ಸಾರ್ವಜನಿಕ ಹಾಗೂ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ನಿಯಮವನ್ನು ಸಡಿಲಿಸಿ, ಪಾಲಿಕೆಯ ನೇರ ನೇಮಕಾತಿ ಹುದ್ದೆಗಳಿಗೆ ಸದರಿಯವರುಗಳ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಮಾನ್ಯ ಆಡಳಿತರಾರರ ಟಿಪ್ಪಣಿ ದಿನಾಂಕ : 25–10–2008ರ ರೀತ್ಯಾ ಮಾನ್ಯ ಆಡಳಿತಗಾರರು ಆದೇಶಿಸಿದ್ದು, ಇದರಂತೆ ಈ ಕಛೇರಿ ಪತ್ರ ಸಂಖ್ಯೆ : ಬಿ12(6)ಪಿಆರ್/772/2008–09, ದಿ: 01–12–2008ರ ರೀತ್ಯಾ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. (ಶ್ರೀ. ಆರ್.ಟಿ. ಸುರೇಶ್ ಬಾಬು, ಸಹಾಯಕ ಅಭಿಯಂತರರು, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಅವರ ಹೆಸರನ್ನು ಕೈಬಿಡಲಾಗಿರುತ್ತದೆ)

**ಷರತ್ತುಗಳು:**

1. ಸದರಿ ಅಭಿಯಂತರರುಗಳ ಸೇವಾ ಜೇಷ್ಟತೆಯನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳ ಸೇವಾ ಜೇಷ್ಟತೆಗಿಂತ ಕಿರಿಯರನ್ನಾಗಿ ಪರಿಗಣಿಸುವುದು.
2. ಸೇವಾ ಹಿರಿತನ ಹಾಗೂ ಮುಂಬಡ್ತಿ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡತಕ್ಕದ್ದಲ್ಲ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ದಿ: 01–06–2011 ರಂದು ಕರಡು ನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಸದರಿ ಕರಡು ನಿಯಮಗಳಿಗೆ ನಿಗಧಿತ ಅವಧಿಯಲ್ಲಿ ಸ್ವೀಕರಿಸುವ ಆಕ್ಷೇಪಣೆ/ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 31 ಎಂಎನ್‌ವೈ 2008, ದಿನಾಂಕ : 04–06–2011ರಲ್ಲಿ ಕೋರಲಾಗಿರುತ್ತದೆ.

ಇದರಂತೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಈ ಕೆಳಕಂಡವರುಗಳ ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ : 30–06–2012ರ ಪತ್ರದಲ್ಲಿ ಕಳುಹಿಸಿಕೊಡಲಾಗಿರುತ್ತದೆ.

| ಕ್ರ ಸಂ | ಆಕ್ಷೇಪಣೆದಾರರ ಹೆಸರು | ವಿಳಾಸ |
|---|---|---|
| 1 | ಶ್ರೀ. ಎಂ ಉದಯಶಂಕರ್ | ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 2 | ಅಧ್ಯಕ್ಷರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರ ಕೇಂದ್ರೀಯ ಸಂಘ (ನೋಂ) |
| 3 | ಶ್ರೀ ಸಿ.ಎಂ ಮಂಜುನಾಥ್ | ನಂ. 48, 15ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–96 |
| 4 | ಶ್ರೀ. ಎಂ.ಟಿ. ಬಾಲಾಜಿ ಮತ್ತು ಇತರೇ ಸಹಾಯಕ ಅಭಿಯಂತರರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ/ ಕಿರಿಯ ಅಬಿಯಂತರರುಗಳು |
| 5 | ಶ್ರೀ.ಎಸ್. ವೆಂಕಟರತ್ನಯ್ಯ | ನಂ. 48, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗೌಡನಹಳ್ಳಿ, ಬೆಂಗಳೂರು. |

ಸರ್ಕಾರವು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರ್ಕಾರವು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ಯುಡಿಡಿ 31 ಎಂಎನ್‌ವೈ 2008, ದಿನಾಂಕ : 31.10.2011ರ ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ

ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿದ್ದು ಸದರಿ ಅಧಿಸೂಚನೆಯು ಈ ಕೆಳಕಂಡಂತೆ ಇರುತ್ತದೆ.

" Whereas, the draft of the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike(Special) Rules, 2011 which the Government of Karnataka proposes to make in exercise of the powers conferred by sub-section (1) of section 91 read with section 421 of the Karnataka Municipal Corporations Act. 1976 (Karnataka Act 14 of 1977 was published in Notification No. UDD 31 MNY 2008, dated 1st June 2011, in part IV-A of the Karnataka Gazette, Extra-ordinary, dated 2nd June 2011inviting objections and suggestions from the persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 2nd June 2011.

And whereas, the objections and suggestions were received in respect of the said draft rules have been examined by the Government.

Now therefore in exercise of the powers conferred by Section 421 of the Karnataka Municipal Corporations Act, 1976 (Karnataka Act 14 of 1977) the Government of Karnataka hereby makes the following rules, namely:

## RULES

1. **Title and commencement:** (1) These rules may be called the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike (Special) Rules 2011.

   (2)They Shall come into force from the date of their publication in the Official Gazette.

2. **Defintions:** (1) In these rules, unless the context otherwise requires, "Deputation Assistant Engineers/Junior Engineers" means an Assistant Engineer or Junior Engineer as the case

may be appointed in the Bruhat Bangalore Mahanagara Palike on deputation basis and has served for not less than three years in the Karnataka State construction Corporation limited.

(2) Other works and expression used in these rules but not defined shall have the same meaning respectively assigned to them in the Karnataka Municipal Corporations Rules 1977.

3. **Absorption of Deputation Assistant Engineer or Junior Engineer in the Bruhat Bangalore Mahanagara Palike-**

Notwithstanding anything contained in the Karnataka Municipal Corporations Rules., 1977 or any other rules made or deemed to have been made under the provisions of the Karnataka Municipal Corporations Act, 1976 (Karnataka Act 14 of 1977), governing the method or recruitment of the employees of the Bruhat

Bangalore Mahanagara Palike every Deputation Assistant Engineer or Junior Engineer as Specified in Column (2) of the Schedule and continues as such in the Bruhat Bangalore Mahanagara Palike on the date of commencement of these rules, be absorbed in the corresponding category of post and scale of pay specified in Columns (4) and (5) respectively in the Bruhat Bangalore Mahanagara Palike Services. Provided that no such person shall be absorbed.

(i) If he was disqualified for appointment under the Karnataka Municipal Corporations Rules, 1977 on the date of appointment as Assistant Engineer or Junior Engineer in the Karnataka State Construction Corporation Limited;

(ii) If he does not possess the minimum academic qualification if any specified in the rules of recruitment applicable for the recruitment to the post in which he is absorbed.

(iii) In any post reserved for the persons belonging to the category of Schedule castes or Scheduled Tribes or other backward classes to which he was appointed as deputation Junior Engineer or Assistant Engineer as the case may be if he is found to be not belonging to such category, Otherwise such posts shall be treated as backlog to be filled by process of Special recruitment from among these classes.

3. **Pay, Pension Leave and Seniority of persons absorbed under these rules:** Notwithstanding anything contained in the Karnataka Municipal Corporations Rules 1977.

(i) The initial basic pay of deputations Assistant Engineer or Junior Engineer as the case may be absorbed under these rules shall be fixed at the minimum of the pay scale applicable to the category of post to which he is absorbed under rule 3.

(ii) The services rendered by a person on deputation Assistant Engineer or Junior Engineer as the case may be prior to the date of absorption shall count for the purpose of leave pension, but not for pay and seniority and grant of selection time scale of pay under Karnataka Civil Services (Time Bound Advancement) Rules. 1983 or grant of selection time scale of pay under the Karnataka Civil Services (Automatic grant of special promotion to the senior scale of pay) Rules, 1991 and additional increment for having completed twenty years of service in the single cadre.

**SCHEDULE**
**(NOTIFICATION NO.UDD 31 MNY 2008 DATED: 31-10-2011)**
**(See Rule-3)**

| Sl. No. | Name of the Deputation Engineers | Designation | Post in which absorbed | Scale of pay of the post in which absorbed (Rs) |
|---|---|---|---|---|
| 1. | Sri. G. Nagabhushana | Assistant Engineer | Assistant Engineer | 11400-21600 |
| 2 | Sri. R. Benakesha | Assistant Engineer | Assistant Engineer | 11400-21600 |

| | | | | |
|---|---|---|---|---|
| 3 | Sri. S.L. Ashwath | Assistant Engineer | Assistant Engineer | 11400-21600 |
| 4 | Sri. S. Vishwanath | Assistant Engineer | Assistant Engineer | 11400-21600 |
| 5 | Sri. H. Ravindranath | Assistant Engineer | Assistant Engineer | 11400-21600 |
| 6 | Sri. H.M. Thimmappa | Junior Engineer | Junior Engineer | 8825-16000 |
| 7 | Sri. K.G. Sundaresh | Junior Engineer | Junior Engineer | 8825-16000 |
| 8 | Sri. B. Ramesh | Junior Engineer | Junior Engineer | 8825-16000 |

ಶ್ರೀ. ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರು ಸರ್ಕಾರದ ಅಧಿಸೂಚನೆಯೊಂದಿಗೆ ಶ್ರೀ ನಾಗಭೂಷಣ್ ಮತ್ತು ಇತರರ ಮನವಿ ಪತ್ರ ದಿನಾಂಕ : 15–11–2011ರ ರೀತ್ಯಾ ಮನವಿ ಸಲ್ಲಿಸಿ, ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಸರ್ಕಾರದಿಂದ ಮುಚ್ಚಲು ಆದೇಶವಾಗಿರುವ ಹಿನ್ನೆಲೆಯಲ್ಲಿ ನಮ್ಮಗಳ ಸೇವೆಯನ್ನು ಪಾಲಿಕೆಯಲ್ಲಿ ಕ್ರಮಬದ್ಧಗೊಳಿಸಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ:31–10–2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಈ ಕಛೇರಿಯ ಸಮಸಂಖ್ಯೆಯ ಟಿಪ್ಪಣಿ ದಿನಾಂಕ : 08–03–2012ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ : ಸಿಆಸುಸ್ಥಾನ/31/2011–12, ದಿನಾಂಕ : 17.03.2012ರಲ್ಲಿ ಒಪ್ಪಿರುತ್ತಾರೆ.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ:31–10–2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**–ಮಾಹಿತಿಗಾಗಿ ಮುಂದೂಡಿದೆ–**

## *24]. ವಿಷಯದ ಸಂಖ್ಯೆ :–ತೆಆಸ್ಥಾಸ/90/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(1)ಪಿಆರ್/251/95–96/08–09, ದಿನಾಂಕ : 18.02.2012 ರಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶದ ಸಂಖ್ಯೆ: ಯುಡಿಡಿ 247 ಎಂಎನ್‌ಯು 95, ದಿನಾಂಕ: 19–03–1996ರ ಆದೇಶದಂತೆ ಸ್ಥಳೀಯ ಸಂಸ್ಥೆಗಳಾದ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಹಾಗೂ ಕಂದಾಯ ಇಲಾಖೆಯ ಮುಜರಾಯಿ ಇಲಾಖೆಯ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ (ಕೆಲವು ಭೂ ವರ್ಗಾವಣೆ ನಿಷೇಧ) ಕಾಯ್ದೆ 1978ರ ಅನ್ವಯ ಆಸ್ತಿಗಳ ಸಂರಕ್ಷಣೆಗೆ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯನ್ನು ದಿನಾಂಕ: 19–03–1996 ರಿಂದ ಸೃಜಿಸಲಾಗಿದೆ. ಸದರಿ ಕಾರ್ಯಾಚರಣೆ ಪಡೆಯ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಾದ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಮತ್ತು ಸರ್ಕಾರ ಸಾಮೂಹಿಕವಾಗಿ ಈ ಪಡೆಯ ಸಿಬ್ಬಂದಿ ಮತ್ತು ಇತರೆ ಆಡಳಿತಾತ್ಮಕ ಖರ್ಚಿನ ಸಂಬಂಧದ ವೆಚ್ಚವನ್ನು ತಮ್ಮ ತಮ್ಮ ಪಾಲನ್ನು ನಿರ್ಧರಿಸಿ, ಆ ರೀತಿ ನಿರ್ಧರಿಸಿದ ವೆಚ್ಚವನ್ನು ಆಯಾ ಸಂಸ್ಥೆಗಳು ಭರಿಸಬೇಕೆಂದು ಸದರಿ ಆದೇಶದಲ್ಲಿ ತಿಳಿಸಲಾಗಿತ್ತು. ನಂತರ ಸರ್ಕಾರವು ಆದೇಶದ ಸಂಖ್ಯೆ: ನಅಇ 133 ಎಂಎನ್‌ಯು 1996, ದಿನಾಂಕ: 17–12–1997ರಲ್ಲಿ ವರ್ಷಕ್ಕೆ ಸದರಿ ಸಂಸ್ಥೆಗಳ ಪಾಲನ್ನು ನಿರ್ಧರಿಸಿ ಈ ಕೆಳಕಂಡಂತೆಗೊತ್ತುಪಡಿಸಿರುತ್ತದೆ.

| | |
|---|---|
| ಸರ್ಕಾರದ ಪಾಲು | – ಶೇ.40ರಷ್ಟು |
| ಬೆಂಗಳೂರು ಮಹಾನಗರ ಪಾಲಿಕೆ | – ಶೇ.20ರಷ್ಟು |
| ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ | – ಶೇ.20ರಷ್ಟು |
| ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | – ಶೇ.20ರಷ್ಟು |

ಸರ್ಕಾರವು ಮೇಲ್ಕಂಡಂತೆ ಪಾಲಿಕೆಗೆ ಗೊತ್ತುಪಡಿಸಿರುವ ಶೇ. 20ರಷ್ಟು ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0217–60–800–003 (other items)ಗೆ ಜಮಾ ಮಾಡಲಾಗುತ್ತಿದೆ.

ಪೊಲೀಸ್ ಮಹಾನಿರೀಕ್ಷಕರು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ (ಬಿ.ಎಂ.ಟಿ.ಎಫ್)ರವರು ಪೊಲೀಸ್ ಮಹಾನಿರೀಕ್ಷಕರು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ (ಬಿ.ಎಂ.ಟಿ.ಎಫ್), ಬೆಂಗಳೂರು ರವರ ಪತ್ರ ಸಂಖ್ಯೆ: ಐಜಿಪಿ/ಬಿಎಂ.ಟಿ.ಎಫ್/77/10–11, ದಿನಾಂಕ : 27–01–2011ರ ಪತ್ರದಲ್ಲಿ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಹೆಡ್ ಕಾನ್ಸಟೇಬಲ್, ಕಾನ್ಸಟೇಬಲ್ ಹಾಗೂ ಚಾಲಕರುಗಳಿಗೆ ತಲಾ ಒಂದು ಜೊತೆ ಸಮವಸ್ತ್ರವನ್ನು ಪ್ರತಿ ವರ್ಷ ನೀಡಲು ಉಪ ಆಯುಕ್ತರು (ಆಡಳಿತ) ರವರ ಕಛೇರಿ ಆದೇಶ ಸಂಖ್ಯೆ: ಬಿ12(1)ಪಿಆರ್/351/95–96/08–09, ದಿನಾಂಕ: 05–03–2009ರಂತೆ ಆದೇಶವಾಗಿರುತ್ತದೆ. ಆದರಂತೆ, 2011ನೇ ಸಮವಸ್ತ್ರವನ್ನು ವಿತರಿಸಲು ನ್ಯೂ ಮಾರ್ಡನ್ ಟೈಲರಿಂಗ್ ಹಾಲ್‌ನ ಮಾಲಿಕರಾದ ಶ್ರೀ ಡಿ. ರಾಜು ರವರಿಂದ ಪಡೆದಿರುವ ಒಟ್ಟು 1,58,820.00 (ಒಂದು ಲಕ್ಷದ ಐವತ್ತೆಂಟು ಸಾವಿರದ ಎಂಟುನೂರ ಇಪ್ಪತ್ತು ರೂಗಳು ಮಾತ್ರ) ಮೌಲ್ಯ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿ, ಬೆಂಗಳೂರು ಮಹಾನಗರ ಕಾರ್ಯಚರಣೆ ಪಡೆಯ ಅಧಿಕಾರಿ, ಸಿಬ್ಬಂದಿ ಹಾಗೂ ಚಾಲಕರುಗಳಿಗೆ ಸಮವಸ್ತ್ರವನ್ನು ವಿತರಿಸಲು ಮೌಲ್ಯ ಪಟ್ಟಿಯಲ್ಲಿನ ಒಟ್ಟು ಹಣ ರೂ. 1,58,820.00 ರೂಗಳನ್ನು ಬಿಡುಗಡೆ ಮಾಡಲು ಆದೇಶವನ್ನು ನೀಡಬೇಕಾಗಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಬೆಂಗಳೂರು ಕಾರ್ಯಾಚರಣೆ ಪಡೆಯ (ಬಿ.ಎಂ.ಟಿ.ಎಫ್) ಪೊಲೀಸ್ ಠಾಣೆಯ ಪಿ.ಎಸ್.ಐ. ಗಳು, ಮುಖ್ಯ ಪೇದೆಗಳು, ಪೇದೆಗಳು ಮತ್ತು ಚಾಲಕರುಗಳು ಸೇರಿ ಒಟ್ಟು 36 ಮಂದಿ ಸಿಬ್ಬಂದಿಗಳಿಗೆ ತಲಾ ಒಂದು ಜೊತೆ ಸಮವಸ್ತ್ರವನ್ನು ನ್ಯೂ ಮಾರ್ಡನ್ ಟೈಲರಿಂಗ್ ಹಾಲ್, ಶ್ರೀರಾಮಪುರ, ಬೆಂಗಳೂರು–21ರವರು ನೀಡಿದ್ದ ಮೌಲ್ಯ ಪಟ್ಟಿಯಂತೆ ವೆಚ್ಚವಾಗಲಿರುವ ಒಟ್ಟು ಮೊತ್ತ ರೂ. 1,38,480/–ಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ತೆಆಸ್ಥಾಸ/283/10–11, ದಿನಾಂಕ: 26–02–2009ರ ನಡವಳಿಯಂತೆ, ಈ ಕಛೇರಿ ಸಮಸಂಖ್ಯೆಯ ದಿನಾಂಕ: 05–03–2009ರ ಕಛೇರಿ ಆದೇಶ ಮತ್ತು ದಿನಾಂಕ: 14–03–2011ರ ನಡವಳಿಯಂತೆ, ಈ ಸಮ ಸಂಖ್ಯೆಯ ದಿನಾಂಕ : 30.03.2011ರ ಕಛೇರಿ ಆದೇಶದಂತೆ ಪಾಲಿಕೆಯ ವತಿಯಿಂದ ಬಡುಗಡೆ ಮಾಡಲು ಅನುಮತಿ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗೆ ಸಮವಸ್ತ್ರ ಖರೀದಿಸಲು ತಗಲುವ ವೆಚ್ಚವನ್ನು ಪ್ರಾಧಿಕಾರದ ಆರ್ಥಿಕ ಸದಸ್ಯರ ಶಿಫಾರಸ್ಸಿನಂತೆ ಕಛೇರಿ ಜ್ಞಾಪನಾ ಪತ್ರ ಸಂಖ್ಯೆ: ಬೆಂ.ಅ.ಪ್ರಾ/ಆಯುಕ್ತರು/ಸಿವಿ/1872/03–04, ದಿನಾಂಕ: 01–12–2003ರಂತೆ ಮಂಜೂರಾತಿ ನೀಡಿರುವ ರೀತಿಯಲ್ಲಿಯೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿಗಳನ್ನು ಸಂರಕ್ಷಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ (ಬಿ.ಎಂ.ಟಿ.ಎಫ್) ಪೊಲೀಸ್ ಠಾಣೆಯ ಪಿಎಸ್‌ಐಗಳು, ಮುಖ್ಯ ಪೇದೆಗಳು, ಪೇದೆಗಳು ಮತ್ತು ಚಾಲಕರುಗಳು ಸೇರಿ ಒಟ್ಟು 36 ಮಂದಿಗಳಿಗೆ ತಲಾ ಒಂದು ಜೊತೆ ಸಮವಸ್ತ್ರವನ್ನು 2011ನೇ ಸಾಲಿಗೆ ಒದಗಿಸಲು ನ್ಯೂ ಮಾಡ್ರನ್ ಟೈಲರಿಂಗ್ ಹಾಲ್ ಶ್ರೀರಾಮಪುರ, ಬೆಂಗಳೂರು–21 ರವರು ನೀಡಿರುವ ಮೌಲ್ಯ ಪಟ್ಟಿಯಂತೆ ವೆಚ್ಚವಾಗಲಿರುವ ಒಟ್ಟು ಮೊತ್ತ ರೂ. 1,58,820.00 (ಒಂದು ಲಕ್ಷದ ಐವತ್ತೆಂಟು ಸಾವಿರದ ಎಂಟುನೂರ ಇಪ್ಪತ್ತು ರೂಗಳು ಮಾತ್ರ)ಗಳನ್ನು ಪಾಲಿಕೆಯ ವತಿಯಿಂದ ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ನಿರ್ಣಯ : ದಿನಾಂಕ : 18.02.2012ರ ಆಯುಕ್ತರ ಟಿಪ್ಪಣಿಯನ್ನು ಹಾಗೂ ಕಡತವನ್ನು ಪರಿಶೀಲಿಸಲಾಗಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯಲ್ಲಿ ಕ್ರಮವಾಗಿ ದಿನಾಂಕ : 27–02–2012 ಮತ್ತು 28–03–2012 ರಂದು ನಿರ್ಣಯ ಕೈಗೊಳ್ಳಲಾಗಿರುವುದರಿಂದ ಅದರಂತೆ ಕ್ರಮವಹಿಸಲು ಕಡತವನ್ನು ಹಿಂದುರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.

## ***251. ವಿಷಯದ ಸಂಖ್ಯೆ :–ತೆಆಸ್ಥಾಸ/91/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಆಆ/ಪಿಆರ್/3214/12–13, ದಿನಾಂಕ : 30.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೆಚ್ಚಿನ ಆರ್ಥಿಕ ಪ್ರತ್ಯಾಯೋಜನೆ ಮಾಡುವ ಕುರಿತು, ಕರ್ನಾಟಕ ರಾಜ್ಯ ಪತ್ರ ಸಂಪುಟ 146 ದಿನಾಂಕ 21.04.2011 ಭಾಗ–4ಎ. ಸರ್ಕಾರದ ಆದೇಶ ಸಂಖ್ಯೆ :ಯುಡಿಡಿ 636 ಎಂಎನ್‌ವೈ 2010–11 ದಿನಾಂಕ :

02.04.2011ರ ಅನ್ವಯ ಈ ಕೆಳಕಂಡಂತೆ ಪಾಲಿಕೆಯ ವಿವಿಧ ಪ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರ ನೀಡಿ ಕಾರ್ಯನಿರ್ವಹಿಸಲು ಆದೇಶವಾಗಿರುತ್ತದೆ.

ಎ) ಕಾಮಗಾರಿ ಅಂದಾಜು ಪಟ್ಟಿ ಅನುಮೋದನೆ

| ಮಂಜೂರಾತಿ ಪ್ರಾಧಿಕಾರ | ಹಾಲಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ) | ಮಾರ್ಪಾಡು ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ಆಯುಕ್ತರು | 300.00 | 50.00 |
| ಸ್ಥಾಯಿ ಸಮಿತಿ | 300.00 ರಿಂದ 400.00 | 200.00 |
| ಪಾಲಿಕೆ ಸಭೆ | 400.00 ರಿಂದ 500.00 | 500.00 |
| ಸರ್ಕಾರ | 500.00 ಲಕ್ಷಗಳಿಗೆ ಮೇಲ್ಪಟ್ಟು | -- |

ಬಿ) ಕಾಮಗಾರಿ ಟೆಂಡರ್ ಅನುಮೋದನೆ

| ಮಂಜೂರಾತಿ ಪ್ರಾಧಿಕಾರ | ಹಾಲಿ ಇರುವ ಮೊತ್ತ (ರೂ.ಲಕ್ಷಗಳಲ್ಲಿ) | ಮಾರ್ಪಾಡು ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ಆಯುಕ್ತರು | 300.00 ಲಕ್ಷಗಳವರೆಗೆ | 60.00 ಲಕ್ಷಗಳವರೆಗೆ |
| ಸ್ಥಾಯಿ ಸಮಿತಿ | 300.00 ರಿಂದ 400.00 | 250.00 ಲಕ್ಷಗಳವರೆಗೆ |
| ಪಾಲಿಕೆ ಸಭೆ | 400.00 ರಿಂದ 500.00 | 500.00 ಲಕ್ಷಗಳವರೆಗೆ |
| ಸರ್ಕಾರ | 500.00 ಲಕ್ಷಗಳಿಗೆ ಮೇಲ್ಪಟ್ಟು | 500.00 ಲಕ್ಷಗಳಿಗೆ ಮೇಲ್ಪಟ್ಟು |

ಸದರಿ ಆದೇಶದನ್ವಯ ರೂ.5.00 ಕೋಟಿಗಿಂತ ಹೆಚ್ಚಿನ ಕಾಮಗಾರಿಗಳ ಅಥವಾ ಸೇವೆಗಳನ್ನು ಪಡೆದುಕೊಳ್ಳುವ ಪ್ರಸ್ತಾವನೆಗಳಿಗೆ ಆಡಳಿತಾತ್ಮಕ ಅನುಮೋದನೆ ಸರ್ಕಾರದ ಒಪ್ಪಿಗೆ ಅವಶ್ಯವಾಗಿರುತ್ತದೆ.

ಇಂತಹ ಪ್ರಸ್ತಾವನೆಗಳ ಅನುಮೋದನೆಗೆ ಸ್ಥಾಯಿ ಸಮಿತಿಗಳ, ಪಾಲಿಕೆ ಮತ್ತು ಸರ್ಕಾರದ ಹಂತದಲ್ಲಿ ಪರಿಶೀಲನೆ ಮತ್ತು ಅನುಮೋದನೆಗೆ ಸುಮಾರು 6 ತಿಂಗಳಿಂದ ಒಂದು ವರ್ಷದ ಕಾಲಾವಧಿ ಹಿಡಿಯುತ್ತದೆ. ಕೆಲವು ಪ್ರಕರಣಗಳಲ್ಲಿ ಇನ್ನೂ ಹೆಚ್ಚಿನ ಸಮಯ ತೆಗೆದುಕೊಂಡಿರುವ ಸಹ ಉದಾಹರಣೆಗಳುಂಟು.

ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು ಕಾಲಮಿತಿಯೊಳಗೆ ನಿರ್ವಹಿಸದಿದ್ದಲ್ಲಿ ಅನೇಕ ಸಂದರ್ಭಗಳಲ್ಲಿ ಕಾಮಗಾರಿಗಳ ವೆಚ್ಚ ಹೆಚ್ಚುವರಿಯಾಗಿ ಪಾಲಿಕೆಗೆ ಆರ್ಥಿಕ ಹೊರೆಯಾಗುತ್ತದೆ. ಸಾರ್ವಜನಿಕರ ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಮತ್ತು ಸೇವೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಮತ್ತು ಅನಗತ್ಯ ಆರ್ಥಿಕ ಹೊರೆಯನ್ನು ತಪ್ಪಿಸುವ ಸಲುವಾಗಿ ಆರ್ಥಿಕ ಮಿತಿಯನ್ನು 5.00 ಕೋಟಿಗಳಿಂದ 20.00 ಕೋಟಿ ರೂಗಳಿಗೆ ಹೆಚ್ಚಿಸಿದ್ದೇ ಆದಲ್ಲಿ ಅನೇಕ ಸಾರ್ವಜನಿಕ ಕಾಮಗಾರಿಗಳನ್ನು ಪಾಲಿಕೆಯ ಮಟ್ಟದಲ್ಲೇ ಅನುಮೋದಿಸಿಕೊಂಡು ಅನುಷ್ಠಾನಗೊಳಿಸಲು ಅನುಕೂಲಕರವಾಗುವುದು.

ಆದ್ದರಿಂದ, ಪಾಲಿಕೆಗೆ ಈಗಿರುವ ಆರ್ಥಿಕ ಪ್ರತ್ಯಾಯೋಜನೆಯನ್ನು ರೂ.5.00 ಕೋಟಿ ಇಂದ ರೂ.20.00 ಕೋಟಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದುಕೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮತ್ತು ಪಾಲಿಕೆಯ ಸಭೆಯ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :-*** ತಾ॥. 30.06.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

## ***261. ವಿಷಯದ ಸಂಖ್ಯೆ :-ತೆಆಸ್ಥಾಸ/92/2012-13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಮು.ಅ(ದ)/ಪಿಆರ್/2770/11-12, ದಿನಾಂಕ : 30.06.2012 ರಲ್ಲಿ ವಿವರಿಸಿರುವಂತೆ, ಬಸವನಗುಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ :154 ರಲ್ಲಿ ಬರುವ ದೊಡ್ಡ ಗಣಪತಿ ಹಾಗೂ ದೊಡ್ಡ ಬಸವಣ್ಣ ದೇವಸ್ಥಾನದ ಆವರಣದಲ್ಲಿ ಐತಿಹಾಸಿಕ ಕಡಲೆಕಾಯಿ ಪರಿಷೆಯನ್ನು ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ಪ್ರತಿ ವರ್ಷದಂತೆ ಈ ವರ್ಷವು ವಿಜೃಂಭಣೆಯಿಂದ ಮತ್ತು ಅದ್ದೂರಿಯಾಗಿ ನಡೆಸಬೇಕೆಂದು ಹಾಗೂ

ಕಳೆದ ಸಾಲಿನಂತೆ ಈ ಬಾರಿಯು ಸಹ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ತೆಪ್ಪೋತ್ಸವವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆಂದು ಮತ್ತು ಈ ಪರಿಷೆಗೆ ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟ ಜನರು ಬರುವುದರಿಂದ ಹಾಗೂ ಸದರಿ ಕಾರ್ಯಕ್ರಮವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಮುಜರಾಯಿ ಇಲಾಖೆಯ ಸಹಯೋಗದೊಂದಿಗೆ ನಡೆಯುತ್ತಿದ್ದು, ಪಾಲಿಕೆ ವತಿಯಿಂದ ರೂ.15.00 ಲಕ್ಷಗಳನ್ನು ಬಿಡುಗಡೆ ಮಾಡಲು ಸ್ಥಳೀಯ ಶಾಸಕರು ಕೋರಿರುತ್ತಾರೆ. ಸದರಿ ದೇವಸ್ಥಾನವು ಐತಿಹಾಸಿಕ ಪಾರಂಪರಿಕ ದೇವಾಲಯವಾಗಿದ್ದು, ಬೆಂಗಳೂರಿನ ಪ್ರೇಕ್ಷಣಿಯ ಸ್ಥಳವೂ ಆಗಿರುವುದರಿಂದ ಸದರಿ ದಿನದಂದು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಗೂ ತೆಪ್ಪೋತ್ಸವವನ್ನು ಆಚರಿಸಲು **ಯಕ್ಷಕಲಾ ರಂಜಿನಿ (ರಿ),** ಬೆಂಗಳೂರು ಸಂಸ್ಥೆಯ ಮುಖಾಂತರ ಕಾರ್ಯಕ್ರಮವನ್ನು ನಿಯೋಜಿಸಲು ಹಾಗೂ ರೂ.15.00 ಲಕ್ಷಗಳ ಅನುದಾನವನ್ನು ಸದರಿ ಸಂಸ್ಥೆಗೆ ಬಿಡುಗಡೆ ಮಾಡಲು ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-*** ದಿ॥. 30.06.2012ರ ಅಪರ ಆಯುಕ್ತರು (ಯೋ) ಇವರ ಟಿಪ್ಪಣಿಯನ್ನು ಒಪ್ಪಿದೆ.

## ***27]. ವಿಷಯದ ಸಂಖ್ಯೆ :-ತೆಆಸ್ಥಾಸ/93/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಕಂ)ಪಿ.ಆರ್/878/12-13, ದಿನಾಂಕ : 05.07.2012 ರಲ್ಲಿ ವಿವರಿಸಿರುವಂತೆ,_ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯ ಕೇಂದ್ರಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಆಸ್ತಿ ತೆರಿಗೆ ಸ್ವೀಕರಿಸಲು ಪ್ರತಿಯೊಂದು ವಾರ್ಡ್‌ನಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಸದರಿ ಕೇಂದ್ರಗಳಲ್ಲಿ ಆಸ್ತಿ ತೆರಿಗೆ ಸ್ವೀಕರಿಸುವಲ್ಲಿ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಜೊತೆಯಲ್ಲಿ Memorandum of Understanding ಅನುಸಾರ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿ ಕಾರ್ಯನಿರ್ವಹಿಸತ್ತಿದ್ದು ಸದರಿಯವರುಗಳನ್ನು ಕಾಲಕಾಲಕ್ಕೆ ನವೀಕರಿಸುತ್ತಾ ಬಂದಿರುತ್ತದೆ.

ಮುಂದುವರೆದಂತೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ದಿನಾಂಕ : 01.02.2011 ರಿಂದ ಆರು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು ದಿನಾಂಕ : 25-01-2012 ರಂದು ನಡೆದ ಸಭೆಯ ವಿಷಯದ ಸಂಖ್ಯೆ : ತೆಆಸ್ಥಾಸ : 431 : 2011-12 ರಲ್ಲಿ ದಿನಾಂಕ : 19-01-2012 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ ಎಂದು ತೀರ್ಮಾನಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಸಮಗ್ರ ಸರ್ವೆ ಕಾರ್ಯವು ಪೂರ್ಣಗೊಡಿಂದ್ದು ಸದರಿ ಸರ್ವೆ ಕಾರ್ಯದಲ್ಲಿ ಗುರುತಿಸಲಾಗಿರುವ ಎಲ್ಲಾ ಸ್ವತ್ತುಗಳನ್ನು ಜಿ.ಐ.ಎಸ್ ಮಾಹಿತಿಯೊಂದಿಗೆ ತಾಳೆಮಾಡಿ, ಪ್ರತಿಯೊಂದು ಸ್ವತ್ತಿಗೂ ಹೊಸದಾಗಿ ಪಿ.ಐ.ಡಿ ಸಂಖ್ಯೆಯನ್ನು ನೀಡುವ ಕಾರ್ಯವು ಶೇಕಡ 80ರಷ್ಟು ಪೂರ್ಣಗೊಳಿಸಲು ಸಾಧ್ಯವಾಗಿರುತ್ತದೆ. ಹಾಗೂ ಮೇಲ್ಕಂಡ ವಿಸ್ತರಣಾ ಅವಧಿಯಲ್ಲಿ 2012-2013ನೇ ಸಾಲಿನ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪೂರ್ಣ ಮಟ್ಟದಲ್ಲಿ ತೊಡಗಿಸಿಕೊಂಡಿರುವ ಜೊತೆಯಲ್ಲಿ ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವು ಆಧ್ಯತೆ ಮೇಲೆ ಪೂರ್ಣಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಹೊಸದಾಗಿ ಪಿ.ಐ.ಡಿ ಸಂಖ್ಯೆ ನೀಡುವ ಕಾರ್ಯವು ನಿಗಧಿಪಡಿಸಲಾಗಿರುವ ಅವಧಿಯಲ್ಲಿ ಪೂರ್ಣಗೊಂಡಿರುವುದಿಲ್ಲ. ಪ್ರತಿಯೊಂದು ಸ್ವತ್ತಿನ ಮಾಲೀಕರಿಗೆ ಸೂಚನಾ ಪತ್ರವನ್ನು ಜಾರಿ ಮಾಡಿ ಅವುಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಸ್ವತ್ತಿನ ಮಾಲೀಕರಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ಗಣಕಯಂತ್ರದಲ್ಲಿ ದಾಖಲಿಸಿಕೊಳ್ಳಬೇಕಾಗಿರುತ್ತದೆ. ಕಂದಾಯ ಇಲಾಖೆಯ ಕಾರ್ಯನಿರ್ವಾಹಕ ಸಿಬ್ಬಂದಿಯು ಸದರಿ ಕಾರ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈ ಸಂಬಂಧ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೆಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳ ಸೇವೆಯು ಅತ್ಯವಶ್ಯಕವಾಗಿರುತ್ತದೆ. ಹಾಗೂ

ಸದರಿಯವರುಗಳಿಗೆ ನೂತನ ದರ ಪಟ್ಟಿಯಂತೆ ವೇತನವನ್ನು ನಿಡುವಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈಗಾಗಲೇ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳನ್ನೆ ದಿನಾಂಕ : 01–08–2012 ರಿಂದ ನಾಲ್ಕು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ದಿನಾಂಕ: 05–07–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಸರ್ಕಾರವು ಈಗಾಗಲೇ ಸಂಖ್ಯೆ ಸಿಆಸುಇ 43 ಸೇವನೇ 2008 ದಿನಾಂಕ 07–03–2012ರಂತೆ (ಕರ್ನಾಟಕ ಸಿವಿಲ್ ಸೇವಾ ಕಂಪ್ಯೂಟರ್ ಸಾಕ್ಷಾರತ ಪರೀಕ್ಷೆ) ನಿಯಮಗಳು 2009ರಂತೆ ನಿಯಮವನ್ನು ಜಾರಿಗೆ ತಂದಿದ್ದು, ಅದರಂತೆ ಪ್ರತಿ ಸರ್ಕಾರಿ ನೌಕರನಿಗೂ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ (ನಿಯಮ 1ರ ಉಪನಿಯಮ (3) ರಲ್ಲಿ ನಿರ್ಧಿಷ್ಟ ಪಡಿಸಿರುವ ಹುದ್ದೆಗಳಲ್ಲಿರುವವರನ್ನು ಹೊರತುಪಡಿಸಿ) ಸದರಿ ನಿಯಮವನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪ್ರಸ್ತುತ ಪಾಲಿಕೆಯಲ್ಲಿರುವ ಅಧಿಕಾರಿ/ನೌಕರರುಗಳಿಗೆ ನಿಗಧಿತ ಕಾಲಮಿತಿಯಲ್ಲಿ ಕಂಪ್ಯೂಟರ್ ಕಲಿಕೆಯನ್ನು ಕಡ್ಡಾಯಗೊಳಿಸುವುದು. ಈ ನಿಗದಿತ ಅವಧಿಯೊಳಗೆ ಕಂಪ್ಯೂಟರ್ ಕಲಿಯದಿದ್ದಲ್ಲಿ ಅಂತಹವರ ವಾರ್ಷಿಕ ವೇತನ ಬಡ್ತಿಗಳನ್ನು ಹಾಗೂ ಮುಂಬಡ್ತಿಗಳನ್ನು ತಡೆ ಹಿಡಿಯುವುದು. ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಾಲಿಕೆಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ಕೆಲಸ ಕಾರ್ಯಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಂದಾಯ ವಸೂಲಿಗಾರರು / ಕಂದಾಯ ಪರಿವೀಕ್ಷಕರು / ಮೌಲ್ಯ ಮಾಪಕರು ಗಳನ್ನೊಳಗೊಂಡ ಸಿಬ್ಬಂದಿಗಳಿಗೆ ಕಂಪ್ಯೂಟರ್ ಕಲಿಕೆಯನ್ನು ನವೆಂಬರ್–2012ರ ಒಳಗಾಗಿ ಅಗತ್ಯ ತರಬೇತಿಯನ್ನು ನೀಡಿ ಪಾಲಿಕೆಯ ಖಾಯಂ ಸಿಬ್ಬಂದಿಗಳೇ ನಿರ್ವಹಿಸುವಂತೆ ಕ್ರಮವಹಿಸುವುದೆಂದು ಸೂಚಿಸುತ್ತಾ, ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ದಿನಾಂಕ : 05.07.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**